ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 27 ಜುಲೈ 5, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಜುಲೈ 21 ಸಾರ್ವಜನಿಕ ಉದ್ದಿಮೆಗಳ ಮುಷ್ಕರದ ಘೋಷಣೆ

ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಸಮಿತಿ ತೀರ್ಮಾನ :

– ಕಾ|| ಎಂ. ಕೆ. ಪಂಧೆ

ಅಖಿಲ ಭಾರತ ಸಿ.ಐ.ಟಿ.ಯು. ಕೇಂದ್ರದ ಕಾರ್ಯದರ್ಶಿಯಾಗಿರುವ ಕಾ|| ಡಾ. ಎಂ. ಕೆ. ಪಂಧೆಯವರು ಸಾರ್ವಜನಿಕ ಉದ್ಯಮದ ಕಾರ್ಮಿಕರ ನಾಯಕರು ಅರ್ಥಶಾಸ್ತ್ರದಲ್ಲಿ ಪಿ.ಎಚ್. ಡಿ. ಪದವಿ ಪಡೆದು ಪ್ರಾಧ್ಯಾಪಕರಾಗಿದ್ದ ಡಾ. ಎಂ.ಕೆ. ಪಂಧೆಯವರು ತಮ್ಮ ಹುದ್ದೆಯನ್ನು ತೊರೆದು ಕಾರ್ಮಿಕರಿಗಾಗಿ ತಮ್ಮ ಅರ್ಥಶಾಸ್ತ್ರದ ಜ್ಞಾನ ಹಾಗೂ ಸಿ.ಐ.ಟಿ.ಯು.ವಿನ ಅನುಭವದಂತೆ ದುಡಿಯುತ್ತಿದ್ದಾರೆ.

ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ಕಾ|| ಪಂಧೆಯವರು ಕಿಕ್ಕಿರಿದು ನೆರೆದ ಸಾರ್ವಜನಿಕ ಉದ್ಯಮವಲಯದ ಕಾರ್ಮಿಕರ ಸಭೆಯನ್ನು ಹಾಗೂ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಕಾ|| ಪಂಧೆಯವರು, ದೇಶದ ಕೈಗಾರಿಕೋತ್ಪಾದನೆಯ ಮೂಲ ಆಧಾರವಾದ 220 ಸಾರ್ವಜನಿಕ ಉದ್ಯಮಗಳ 21ಲಕ್ಷ ಕಾರ್ಮಿಕರು ಇನ್ನೊಮ್ಮೆ 1987ರ ಜುಲೈ21ರಂದು ಒಂದು ದಿವಸದ ಅಖಿಲ ಭಾರತ ಮುಷ್ಕರಕ್ಕೆ ಭರದಿಂದ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ಸಾರ್ವಜನಿಕ ಉದ್ಯಮ ವಲಯವನ್ನೇ ಹೀಗಳೆಯುವ ಪ್ರಯತ್ನಗಳ ಜೊತೆಗೆ ಸಾರ್ವಜನಿಕ ಉದ್ಯಮವಲಯಕ್ಕೆ ಬೇಕಾದ ಕಾರ್ಮಿಕರ ಸಂಖ್ಯೆಯನ್ನೇ ತುಂಡರಿಸುವ, ಅವರಿಗೆ ಈಗ ನೀಡಿರುವ ವಾಹನ ಸೌಲಭ್ಯ, ವಸತಿ ಸೌಲಭ್ಯ, ಆರೋಗ್ಯ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುವ ಪ್ರಯತ್ನ. ಅದರ ಜೊತೆಗೆ ವೇತನವನ್ನೂ ಏರಿಸಬಾರದೆಂಬ ಸಂಕಲ್ಪ ಮೊದಲಾದ ನೀತಿಗಳಿಂದ ಈ ಕಾರ್ಮಿಕರ ಮೇಲೆ ಧಾಳಿ ನಡೆಸುವ ಪ್ರಯತ್ನ ಮಾಡುತ್ತಿದೆ. ಸಾರ್ವಜನಿಕ ಉದ್ಯಮದ ವಲಯದಲ್ಲಿ ನಡೆಯುತ್ತಿರುವ ವೇತನ ಒಪ್ಪಂದದ ಮಾತುಕತೆಗಳಲ್ಲಿ ಕಾರ್ಮಿಕರು ತಮ್ಮ ಹೋರಾಟದಿಂದ ಪಡೆದಿರುವ ಸವಲತ್ತುಗಳನ್ನು ಕಸಿದುಕೊಳ್ಳಲು ಪ್ರಯತ್ನ ನಡೆಸುತ್ತಿದೆ" ಎಂದರು. ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾದ ಸಾರ್ವಜನಿಕ ಉದ್ಯಮಗಳ ಬ್ಯುರೊ ಮಾರ್ಗದರ್ಶನಗಳನ್ನೂ ರದ್ದು ಮಾಡಬೇಕು, ವೇತನದ ಶೇ.20 ರಷ್ಟು ಮಧ್ಯಂತರ ಪರಿಹಾರ ನೀಡಬೇಕು, ಕಾರ್ಮಿಕರು ಮುಂಡಿಸಿರುವ ಬೇಡಿಕೆಗಳನ್ನು ಇತ್ಯರ್ಥಗೊಳಿಸಬೇಕು. ಎಲ್ಲಾ ಹಂತಗಳಲ್ಲೂ ಜೀವನವೆಚ್ಚದ ಹೆಚ್ಚಳವನ್ನು ಸರಿದೂಗಿಸುವುದಕ್ಕೆ ಅವಶ್ಯವಾದ ತುಟ್ಟಿಭತ್ಯೆ ಇವೇ ಇಂದು ಸಾರ್ವಜನಿಕಕ್ಷೇತ್ರದ ಕಾರ್ಮಿಕರ ಬೇಡಿಕೆಗಳು.

ಸಾರ್ವಜನಿಕ ಉದ್ಯಮದ ಕಾರ್ಮಿಕರ ಮನಸ್ಥಿತಿ ಕಾರ್ಮಿಕ ಸಂಘಟನೆಗಳ ಐಕ್ಯತೆಯನ್ನು ಬಲ ಪಡಿಸುತ್ತಿದೆ. ಇಂಟಕ್ ಕೂಡ ಕೇಂದ್ರ ಸರ್ಕಾರದ ಮಾರ್ಗದರ್ಶಕ ಸೂತ್ರಗಳ ವಿರುದ್ಧ ದನಿಯೆತ್ತಿ ಇತರ ಕಾರ್ಮಿಕ ಸಂಘಟನೆಗಳ ವಿರುದ್ಧ ಸೇರಬೇಕಾಗಿ ಬಂದಿದೆ.

ವೇತನವನ್ನು ಕಾರ್ಮಿಕರು ಮಾಡುವ ಉತ್ಪಾದನೆಗೆ ಜೋಡಿಸಬೇಕು(ಅಂದರೆ ಉತ್ಪಾದನೆಯಲ್ಲಿ ಯಾವುದೇ ಕಾರಣಕ್ಕೆ ಹೆಚ್ಚು ಕಡಿಮೆಯಾದರೂ ಕಾರ್ಮಿಕನ ಸಂಬಳದಲ್ಲಿ ಕಡಿತವಾಗಬೇಕು) ಎಂಬ ಈ ಮಾರ್ಗದರ್ಶಕ ಸೂತ್ರಗಳಿಗೆ ಅಂಟಿಕೊಂಡಿರುವುದರಿಂದಲೇ ಸಾರ್ವಜನಿಕ ಕ್ಷೇತ್ರದ ಮಾತುಕತೆಗಳು ತಡೆಹಿಡಿಯಲ್ಪಟ್ಟವೆ. ಆದರೆ ಅದೇ ವೇಳೆಯಲ್ಲಿ ಇದೇ ಉದ್ಯಮಗಳ ಅಧಿಕಾರಿಗಳಿಗೆ ತಿಂಗಳಿಗೆ 120ರೂ. ನಿಂದ 1200ರೂ.ವರೆಗೆ ಮಧ್ಯಂತರ ಪರಿಹಾರವನ್ನಾಗಿ ಕೊಡಲಾಗಿದೆ. ಮೇಲ್ವಿಚಾರಕ ಸಿಬ್ಬಂದಿಗೆ ತಿಂಗಳಿಗೆ 120ರಿಂದ 420ರೂ.ವರೆಗೆ ಜನವರಿ1 ರಿಂದ ಪರಿಹಾರ ಕೊಡಬೇಕೆಂದು ನಿರ್ಧರಿಸಲಾಗಿದೆ. ಇದು ಕಾರ್ಮಿಕರಲ್ಲಿ

[8ನೇ ಪುಟ ನೋಡಿ]

ಬೆಂಗಳೂರಿನಲ್ಲಿ ವಿರೋಧ ಪಕ್ಷಗಳ ಅಭ್ಯರ್ಥಿ ಕೃಷ್ಣ ಐಯ್ಯರ್

ಚೈತನ್ಯಶಾಲಿ ರಾಷ್ಟ್ರಪತಿ ಬೇಕು

"ಯಾರು ರಾಷ್ಟ್ರಪತಿ ಆಗುತ್ತಾರೆ ಎಂಬುದು ಪ್ರಶ್ನೆಯಲ್ಲ. ರಾಷ್ಟ್ರಪತಿ ಸ್ಥಾನ ಹೇಗಿರುತ್ತದೆ ಎಂಬುದು ಮುಖ್ಯ"ಎಂದು ವಿರೋಧ ಪಕ್ಷಗಳ ವತಿಯಿಂದ ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಶ್ರೀ ವಿ. ಆರ್. ಕೃಷ್ಣ ಅಯ್ಯರ್ ಬೆಂಗಳೂರಿನಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಮತ್ತೊಮ್ಮೆ ಒತ್ತಿ ಹೇಳಿದರು. ಮುಂಬರುವ ಚುನಾವಣಾ ಹೋರಾಟ

ಯಾರು ರಾಷ್ಟ್ರಾಧ್ಯಕ್ಷ ಆಗುತ್ತಾರೆ ಎಂಬುದು ಮುಖ್ಯ ಪ್ರಶ್ನೆಯಲ್ಲ. ಅವರ ಅಧ್ಯಕ್ಷೀಯತೆ ಹೇಗಿರುತ್ತದೆ ಎಂಬುದು ಮುಖ್ಯ ಪ್ರಶ್ನೆ.

ರಾಷ್ಟ್ರಪತಿ ಮೂಕ ಬೊಂಬೆಯೋ ಅಥವಾ ಚೈತನ್ಯಶಾಲಿಯೋ ಎಂಬ ಎರಡು ಭಿನ್ನ ಪರಿಕಲ್ಪನೆಗಳ ನಡುವಿನ ಹೋರಾಟ ಎಂದು ಬಣ್ಣಿಸಿದ ಶ್ರೀ ಅಯ್ಯರ್ ರಾಷ್ಟ್ರಪತಿ ಕೇವಲ ಅಲಂಕಾರದ ಗೊಂಬೆಯೆಂಬ ಪರಿಕಲ್ಪನೆಯನ್ನು ತಾನು ವಿರೋಧಿಸುವುದಾಗಿ ತಿಳಿಸಿದರು.

ಆಳ್ವಿಕೆ ನಡೆಸುವುದು ಮಂತ್ರಿಮಂಡಳವೇ. ಆದರೆ ರಾಷ್ಟ್ರಪತಿಗೆ ಆಡಳಿತದ ಎಲ್ಲಾ ಸಂಗತಿಗಳ ಬಗ್ಗೆ ಸಲಹೆ ನೀಡುವ ಎಚ್ಚರಿಸುವ, ಪ್ರೋತ್ಸಾಹಿಸುವ ಹಕ್ಕು ಇದೆ. ಈಗ "ನೀವು ಏನು ಕೇಳ ಬೇಕೆಂಬುದನ್ನೂ ನಾವು ನಿರ್ಧರಿಸುತ್ತೇವೆ" ಎಂದು ರಾಷ್ಟ್ರಪತಿಗೆ ಹೇಳಲಾಗುತ್ತಿದೆ. ಪ್ರಧಾನ ಮಂತ್ರಿ-ರಾಷ್ಟ್ರಪತಿ ವಿರಸ ರಾಷ್ಟ್ರಪತಿ ನಿರರ್ಥಕ ಎಂಬ ಮಟ್ಟಕ್ಕಿಳಿದಿದೆ. ರಾಷ್ಟ್ರಪತಿಯೆಂದರೆ ಪ್ರಧಾನ ಮಂತ್ರಿಯವರು ನೇಮಿಸುವ ರಾಜ್ಯಪಾಲರಂತಲ್ಲ ಎಂದು ಶ್ರೀ ಅಯ್ಯರ್ ನುಡಿದರು.

ತಾನು ಯಾವುದೇ ಒಂದು ಪಕ್ಷದ ವೈಯಕ್ತಿಕ ಅಭ್ಯರ್ಥಿಯಲ್ಲ, ಸಮಸ್ತ ವಿರೋಧ ಪಕ್ಷಗಳ ಕೋರಿಕೆಯ ಮೇರೆಗೆ ಸ್ಪರ್ಧಿಸುತ್ತಿರುವುದಾಗಿ ಒಂದು ಪ್ರಶ್ನೆಯನ್ನುತ್ತರಿಸುತ್ತಾ ತಿಳಿಸಿದ ಶ್ರೀ ಕೃಷ್ಣ ಅಯ್ಯರ್ ಕಾಂಗ್ರೆಸ್‌ಸದಸ್ಯರು ತಮ್ಮ "ಅಂತಃಸ್ಸಾಕ್ಷಿ"ಯ ಪ್ರಕಾರವಲ್ಲ,ತಮ್ಮ "ತೀರ್ಮಾನ"ದ ಪ್ರಕಾರ ಮತ ನೀಡಬೇಕಾಗಿ ತಾನು ಮನವಿ ಮಾಡಿಕೊಂಡಿರುವುದಾಗಿ ಸ್ಪಷ್ಟೀಕರಿಸಿದರು.

ಅಪೂರ್ವ ಸ್ವಾಗತ

ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಕೃಷ್ಣ ಐಯ್ಯರ್‌ರವರು ತಮ್ಮ ಚುನಾವಣಾ ಪ್ರಚಾರಕ್ಕಾಗಿ ಬೆಂಗಳೂರಿನಲ್ಲಿ ಬಂದಿಳಿದಾಗ ಹೃತ್ಪೂರ್ವಕ ಸ್ವಾಗತ ಕಾದಿತ್ತು. ಜ್ಯಾತ್ಯಾತೀತ ವಿರೋಧ ಪಕ್ಷಗಳ ನಾಯಕರೆಲ್ಲರೂ ವಿಮಾನ ನಿಲ್ದಾಣದಲ್ಲಿ ಕಾದಿದ್ದು ಸ್ವಾಗತಿಸಿದರು. ಜನತಾ ಪಕ್ಷದ ಪರವಾಗಿ ಅಧ್ಯಕ್ಷ ಎಂ. ಚಂದ್ರಶೇಖರ್, ಸಿ.ಪಿ.ಐ (ಎಂ)

[8ನೇ ಪುಟ ನೋಡಿ]

ಪ್ರಜಾಸತ್ತೆಯ ರಕ್ಷಣೆಗೆ ಬದ್ಧರಾದ ಕೃಷ್ಣ ಐಯ್ಯರ್

ವೈದ್ಯನಾಥಪುರಂ ರಾಮಐಯ್ಯರ್ ಕೃಷ್ಣ ಐಯ್ಯರ್‌ರವರ ಹೆಸರು ದೇಶದ ಎಲ್ಲಾ ಪ್ರಜ್ಞಾವಂತರ ಮನೆಮಾತು. ಅಧ್ಯಕ್ಷ ಪದವಿಗೆ ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಅವರ ಸ್ಪರ್ಧೆ ದೇಶದ ರಾಜಕೀಯ ಪಡೆಯುತ್ತಿರುವ ಜನಪರ ತಿರುವಿನ ಸಂಕೇತ.

ವೀರರ ಪರವಾಗಿ ನ್ಯಾಯಾಲಯದಲ್ಲಿ ಹೋರಾಡಿದ್ದಕ್ಕೆ ದೇಶ ಸ್ವತಂತ್ರವಾದ ಕೂಡಲೇ ಪಡೆದ ಬಹುಮಾನ 1948 ರಲ್ಲಿ ಬಂಧನ ಕಮ್ಯೂನಿಸ್ಟರ ಪರವಾಗಿ ನ್ಯಾಯಾಲಯದಲ್ಲಿ ವಾದಿಸಿದರು ಎಂಬುದೊಂದೇ ಅಪರಾಧ.

1938ರಲ್ಲಿ ವಕೀಲ ಪದವಿ ಆರಂಭಿಸಿದ ಇವರು ಕರ್ನಾಟಕದ ದ.ಕ

ಇದು ಮೂಕ ಬೊಂಬೆಯಾದ ರಾಷ್ಟ್ರಪತಿ ಬೇಕೋ ಅಥವಾ ಚೈತನ್ಯಶಾಲಿ ಅಧ್ಯಕ್ಷ ಬೇಕೇ ಎಂಬ ಎರಡು ಪರಿಕಲ್ಪನೆಗಳ ನಡುವಿನ ಪ್ರಶ್ನೆ.

ದುಡಿಯುವ ಜನಗಳ ಸುಖೀ ಜೀವನಕ್ಕಾಗಿ ಅಹರ್ನಿಶಿ ದುಡಿದ, ನ್ಯಾಯಾಲಯ ರಂಗದಲ್ಲಿ ಅವರ ಹೋರಾಟವನ್ನು ಪ್ರತಿಬಿಂಬಿಸಿದವರು ಕೃಷ್ಣ ಐಯ್ಯರ್‌ರವರು ಬ್ರಿಟಿಷರ ದುರಾಡಳಿತಕ್ಕೆ ವಿರೋಧವಾಗಿ, ಸ್ವಾತಂತ್ರ್ಯ

ಹಾಗೂ ಕೊಡಗು ಜಿಲ್ಲೆಗಳಲ್ಲಿಯೂ ವಕೀಲ ವೃತ್ತಿ ನಡೆಸಿದ್ದರು. ಹೆಂಚಿನ ಕಾರ್ಮಿಕರ ಮರಣದಂಡನೆಯನ್ನು ವಜಾ ಮಾಡಿಸಿದ್ದು ಇವರೇ.

(8ನೇ ಪುಟ ನೋಡಿ)

ಬಲಪಂಥೀಯ ಸರಕಾರದ ವಿರುದ್ಧ ವಿದ್ಯಾರ್ಥಿಗಳ ಭೀಕರ ಸೆಣಸಾಟ

ಇತ್ತೀಚೆಗೆ ಫ್ರಾನ್ಸ್‌ನಲ್ಲಿ ತೀವ್ರ ಪ್ರತಿಗಾಮಿ ಸರಕಾರ ಹಿಮ್ಮೆಟ್ಟುವಂತೆ ಮಾಡಿದ ವಿದ್ಯಾರ್ಥಿಗಳ ಹೋರಾಟ ಇಡೀ ಯುರೋಪಿನ ಪ್ರಜಾಸತ್ತಾತ್ಮಕ ಚಳುವಳಿಗೆ ಸ್ಫೂರ್ತಿ ನೀಡಿದೆ.

1986 ಡಿಸೆಂಬರ್ ಪ್ಯಾರೀಸ್‌ನ ಲ್ಯಾಟಿನ್ ಚೌಕದಲ್ಲಿ ಪೋಲೀಸರೊಂದಿಗೆ ವಿದ್ಯಾರ್ಥಿಗಳ ಘರ್ಷಣೆ. ಫ್ರಾನ್ಸ್‌ಗೆ 1968ರ ಮೇ ದಿನಗಳ ನೆನಪು. 20 ವರ್ಷಗಳ ಹಿಂದೆಯಷ್ಟೇ ಯುರೋಪಿನಾದ್ಯಂತ ಬಿರುಗಾಳಿಯೆಬ್ಬಿಸಿದ ಬಂಡಾಯದಲ್ಲಿ ವಿದ್ಯಾರ್ಥಿ ಕಾರ್ಮಿಕರ ಅತ್ಯಂತ ವಿಶಿಷ್ಟ ರೀತಿಯ ಮುಖಾಮುಖಿ ಐಕ್ಯ ಹೋರಾಟ. ಇಂದಿನ ಘರ್ಷಣೆಗಳು ಅದೇ ಸ್ಥಳಗಳಲ್ಲಿ ಜರುಗಿದ್ದರೂ, ರಾಜಕೀಯ ಚಿತ್ರಣವು ಸಂಪೂರ್ಣ ಭಿನ್ನವಾಗಿದೆ. 1968ರ ಚಳುವಳಿಯು ಸಾಮಾನ್ಯ ಸ್ಥಿತಿಗತಿಗಳನ್ನು ಬದಲಾಯಿಸುವ ಉದ್ದೇಶ ಹೊಂದಿದ ಅತ್ಯಂತ ಮೂಲ ಸ್ವರೂಪದ ಸಂಘರ್ಷ. ಆಗಿನ ಕೆಲವು ಸಾಧನೆಗಳನ್ನು ಸಂರಕ್ಷಿಸಲು ಇಂದಿನ ವಿದ್ಯಾರ್ಥಿಗಳ ಸೆಣಸಾಟ.

1968ರ ಸಂದದ ನೆನಪು

1960ರ ದಶಕವು ಪಾಶ್ಚಿಮಾತ್ಯ ಬಂಡವಾಳಶಾಹಿಯ ಸುವರ್ಣ ವರ್ಷಗಳಾಗಿದ್ದವು. ಈ ಔನತ್ಯದ ಕುದಿಯಲ್ಲಿ, ಸರಿಸುಮಾರು ಪೂರ್ಣೋದ್ಯೋಗ ಸ್ಥಿತಿಯು ಸಮಾಜದ ಶಕ್ತಿ ಸಮತೋಲನವನ್ನು ಮಾರ್ಪಡಿಸಿತ್ತು. ಕಾರ್ಮಿಕವರ್ಗವು ಪುನಃಶ್ಚೇತನಗೊಳ್ಳುತ್ತಿದ್ದು ಬೆಳೆಯುತ್ತಿರುವ ಈ ವರ್ಗ ವೈರುಧ್ಯವು ಬಂಡವಾಳಶಾಹಿ ಉತ್ಕರ್ಷದ ಸೂಚನೆಯಾಗಿತ್ತು. 1968 ಮೇನಲ್ಲಿ ಫ್ರಾನ್ಸ್ ಈ ಅಲೆಯ ಇನ್ನೂ ಆಗತಾನೆ ಏರುತ್ತಿತ್ತಷ್ಟೇ. 1969ರಲ್ಲಿ ಇಟಲಿಯು ತನ್ನ ರಾಜಕೀಯವನ್ನು ಪರಿವರ್ತಿಸುವ "ಸುಡುವ ಚಳಿಗಾಲ"ವನ್ನು ಕಂಡಿತು. ಜರ್ಮನಿ ಮತ್ತು ಹಾಲೆಂಡ್‌ಗಳಲ್ಲಿ ಪ್ರಚಂಡ ಮುಷ್ಕರಗಳು ಜರುಗಿದವು. ಉನ್ನತ ಶಿಕ್ಷಣದಲ್ಲಿ ಬದಲಾವಣೆಗಳಿಗೆ ಒತ್ತಾಯಿಸಿ ಮಾರ್ಚ್ ತಿಂಗಳಲ್ಲಿ ವಿದ್ಯಾರ್ಥಿಗಳು "ನಾನ್‌ಟೆರ್ರೆ" ವಿಶ್ವವಿದ್ಯಾಲಯವನ್ನು ವಶಪಡಿಸಿಕೊಳ್ಳುವ ಮೂಲಕ ಫ್ರೆಂಚ್ ಘಟನಾವಳಿಗಳು ಪ್ರಾರಂಭವಾದವು. ವಿ.ವಿ.ಗಳ ಅಧಿಕಾರಿಗಳು ಪೋಲೀಸರನ್ನು ಆಹ್ವಾನಿಸಿ 600 ವಿದ್ಯಾರ್ಥಿಗಳನ್ನು ಬಂಧಿಸಿದಾಗ ವಿ.ವಿ. ಶಿಕ್ಷಕರ ರಾಷ್ಟ್ರೀಯ ಸಂಘದಿಂದ ಪ್ರತಿಭಟನಾ ಮುಷ್ಕರದ ಕರೆ. ಮೇ 6ರಂದು 60 ಸಾವಿರ ವಿದ್ಯಾರ್ಥಿಗಳ ಪ್ರದರ್ಶನದ ಮೇಲೆ ದೊಂಬಿ ನಿಯಂತ್ರಣ ಮಾಡುವ ವಿಶೇಷ ಪೋಲೀಸ್ ಪಡೆಧಾಳಿ ನಡೆಸಿ ನೂರಾರು ಜನರನ್ನು ಗಾಯಗೊಳಿಸಿದರು. ಫ್ರಾನ್ಸ್‌ನಾದ್ಯಂತ ಮುಷ್ಕರಗಳು ಅರಳಿದವು. ಮೇ 10ರಂದು ವಿದ್ಯಾರ್ಥಿಗಳು 'ಲ್ಯಾಟೀನ್ ಚೌಕ'ವನ್ನು ವಶಪಡಿಸಿಕೊಂಡರು. ದೇಶದಾದ್ಯಂತ 350ಕ್ಕೂ ಹೆಚ್ಚು ಪ್ರೌಢಶಾಲೆಗಳನ್ನು ವಶಪಡಿಸಿಕೊಂಡಿದ್ದ ಕಾರಣ ಪೋಲೀಸರ ಪ್ರಯತ್ನಗಳು ನಿಷ್ಪ್ರಯೋಜಕವಾದವು. ಸರ್ಕಾರದ ದಬ್ಬಾಳಿಕೆಯ ವಿರುದ್ಧ ಟ್ರೇಡ್‌ಯೂನಿಯನ್ ಒಕ್ಕೂಟಗಳು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದವು. ಕಾರ್ಖಾನೆಗಳು ಮುಚ್ಚಿದವು, ರೈಲುಗಳು ನಿಂತವು, ಇಡೀ ದೇಶದ ಜನಜೀವನ ಅಸ್ತವ್ಯಸ್ತಗೊಂಡಿತು. ಕೈಗಾರಿಕೆಗಳ ಪ್ರಜಾಪ್ರಭುತ್ವೀಕರಣಕ್ಕೆ ಒತ್ತಾಯಿಸಿ ಕಾರ್ಮಿಕರು ಅನೇಕ ಕಾರ್ಖಾನೆಗಳನ್ನು ವಶಪಡಿಸಿಕೊಂಡರು. ತೀವ್ರ ಬಲಪಂಥೀಯಗುಂಪುಗಳ ಬೆಂಬಲವನ್ನು ಬಿಟ್ಟರೆ "ಜನರಲ್ ಡಿಗಾಲೆ"ಯ ಸರ್ಕಾರವು ಉಳಿದೆಲ್ಲರ ಬೆಂಬಲವನ್ನು ಕಳೆದುಕೊಂಡಿತು. ಮೇ 30ರಂದು ಪೋಲೀಸರು ಪ್ರದರ್ಶನವೊಂದರ ಮೇಲೆ ಗುಂಡು ಹಾರಿಸಿದ ಬಳಿಕ ಸರ್ಕಾರವು ಸಂಪೂರ್ಣವಾಗಿ ವಿಶ್ವಾಸ ಕಳೆದುಕೊಂಡು ರಾಜೀನಾಮೆ ನೀಡ ಬೇಕಾಯಿತು.

1986ರಲ್ಲಿ

1986ರ ಪರಿಸ್ಥಿತಿಯು 1968ಕ್ಕಿಂತ ಹೆಚ್ಚೇನೂ ಭಿನ್ನವಾಗಿರಲು ಸಾಧ್ಯವಿರಲಿಲ್ಲ. ಆರ್ಥಿಕ ಬಿಕ್ಕಟ್ಟು ವಿಷಮಗೊಂಡಂತೆ ಸಾಮೂಹಿಕ ನಿರುದ್ಯೋಗವು ತೀವ್ರವಾಗಿತ್ತಲ್ಲದೆ ಕಾರ್ಮಿಕ ವರ್ಗ ಬಹಳ ದುರ್ಬಲಗೊಂಡಿತ್ತು. ಫ್ಯಾಸಿಸ್ಟ್ ನ್ಯಾಷನಲ್ ಪಕ್ಷವು ಅಧಿಕ ಬೆಂಬಲಗಳಿಸಿಕೊಂಡು ಉತ್ತರ ಆಫ್ರಿಕಾ(ಅಲ್ಜೀರಿಯ, ಟುನೀಷಿಯ, ಮೊರೊಕೊ) ದಿಂದ ಬಂದ ವಲಸೆಗಾರರ ಮೇಲೆ ಜನಾಂಗೀಯ ಧಾಳಿಗಳು ತೀವ್ರಗೊಂಡವು. ಆಡಳಿತರೂಢ ಸಮಾಜವಾದಿಗಳು ಮತ್ತು ಕಮ್ಯೂನಿಸ್ಟ್ ಪಕ್ಷಗಳೆರಡೂ ಬೆಂಬಲ ಕಳೆದುಕೊಂಡವು. 1986ರ ಚುನಾವಣೆಯಲ್ಲಿ ಬಲಪಂಥೀಯ ವಾದಿಗಳು ಭಾರೀ ಬಹುಮತ ಗಳಿಸಿದರು. ಅತ್ಯಂತ ವರ್ಣಭೇದವಾದಿಯಾದ ನ್ಯಾಷನಲ್ ಪಕ್ಷವು ಶೇಕಡ 10ಕ್ಕಿಂತ ಹೆಚ್ಚು ಮತ ಪಡೆಯಿತು. ಅಧ್ಯಕ್ಷ ಮಿಟ್ಟೆರಾಂಡ್ ಸಮಾಜವಾದಿ ಪಕ್ಷದವರಾಗಿದ್ದರೂ ಬಲಪಂಥೀಯ ಪಕ್ಷಗಳ ಪ್ರತಿನಿಧಿ ಪ್ರಧಾನಿ ಚಿರಾಕ್ ಸರ್ಕಾರದ ನೇತೃತ್ವ ವಹಿಸಿದ್ದಾರೆ.

ಈ ಹೊಸ ಸರ್ಕಾರವು ಖಾಸಗಿ ಬಂಡವಾಳದ ಆಶ್ರಯದಲ್ಲಿ ಕೈಗಾರಿಕೆಯನ್ನು ಹೆಚ್ಚು ಸಮರ್ಥಗೊಳಿಸುವ ಉದ್ದೇಶವನ್ನು ಹೊಂದಿತ್ತು. ಸಾರ್ವಜನಿಕ ವಲಯದ ಕಂಪನಿಗಳನ್ನು ಖಾಸಗೀಕರಣ ಗೊಳಿಸಲು ಮತ್ತು ಕಾರ್ಮಿಕರನ್ನು ಹತೋಟಿಯಲ್ಲಿಡಲು ಸರ್ಕಾರವು ಹವಣಿಸಿತ್ತು. ವಿಶ್ವವಿದ್ಯಾನಿಲಯಗಳಿಗೆ ಪ್ರವೇಶವನ್ನು ನಿರ್ಬಂಧಿಸುವ ಹಾಗೂ ಶುಲ್ಕಗಳನ್ನು ದ್ವಿಗುಣಗೊಳಿಸುವ ಮಸೂದೆಯೊಂದನ್ನು ನ್ಯಾಷನಲ್ ಅಸೆಂಬ್ಲಿಯಲ್ಲಿ ಮಂಡಿಸಲಾಯಿತು. ಯಾರೂ ಸಹ ಯಾವುದೇ ರೀತಿಯ ಗಂಭೀರವಾದ ಅಡಚಣೆಯನ್ನು ನಿರೀಕ್ಷಿಸಿರಲಿಲ್ಲ. ಫ್ರಾನ್ಸ್‌ನ ವಿದ್ಯಾರ್ಥಿಗಳು ನಿಶ್ಚಿಂತರಾಗಿ ತಮ್ಮದೇ ಆದ ವೈಯಕ್ತಿಕ ವಿಷಯಗಳಲ್ಲಿ ಮಗ್ನರಾಗಿದ್ದರು. 1968ರ ದಿನಗಳ ನೆನಪು ಎಂದೋ ಮಾಸಿ ಹೋಗಿತ್ತು. ಆದರೆ ನಡೆದುದೇನೆಂದರೆ ಆತ್ಯಾಶ್ಚರ್ಯಕರ ರೀತಿಯಲ್ಲಿ ವಿದ್ಯಾರ್ಥಿಗಳು ಉದ್ವಿಗ್ನರಾಗಿ ಬೀದಿಗಿಳಿದರು. ಮುಷ್ಕರಗಳು ತಲೆಎತ್ತಿದವು. ವಿಶ್ವವಿದ್ಯಾಲಯಗಳನ್ನು ವಶಪಡಿಸಿಕೊಂಡ ವಿದ್ಯಾರ್ಥಿಗಳು ತಮ್ಮ ಕಾರ್ಯಾಚರಣೆಯನ್ನು ಸಮನ್ವಯಗೊಳಿಸಲು ರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದ ಸಂಘಟನಾ ಸಮಿತಿಗಳನ್ನು ರಚಿಸಿಕೊಂಡರು. 5ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳುಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪ್ಯಾರೀಸ್ ನಗರದಲ್ಲಿ ಬೃಹತ್ ಪ್ರದರ್ಶನವೊಂದನ್ನು ನಡೆಸಿದರು. ದಿಗ್ಭ್ರಮೆಗೊಳಗಾದ ಪ್ರಧಾನ ಮಂತ್ರಿ ಚಿರಾಕ್ ಮಸೂದೆಯನ್ನು ಸಂಸತ್ ಸಮಿತಿಯೊಂದರ ಪರಿಶೀಲನೆಗೊಪ್ಪಿಸಿ ಉಸಿರಾಡಲು ಸ್ವಲ್ಪ ಸಮಯಾವಕಾಶ ಪಡೆದುಕೊಳ್ಳಲು ಪ್ರಯತ್ನಿಸಿದರು.

ಆದರೆ ಚಳವಳಿಯು ಮುಂದುವರಿದು ಡಿಸೆಂಬರ್ 4ರಂದು 10ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ಯಾರೀಸ್ ನಗರದಲ್ಲಿ ಮೆರವಣಿಗೆ ನಡೆಸಿದರು. ಫ್ರಾನ್ಸ್‌ನ ಉದ್ದಗಲಕ್ಕೂ ಮರ್ಸೈಲ್ಲೆಸ್, ಲ್ಯೋನ್ಸ್, ಟೌಲೌಸ್ಯೇ, ಗ್ರೆನೊಟೆಲ್ ಮತ್ತು ನಾಂಟೆಸ್ ಮುಂತಾದೆಡೆ ಇದೇರೀತಿಯ ಮೆರವಣಿಗೆಗಳು ನಡೆದವು. ಪ್ಯಾರೀಸ್‌ನಲ್ಲಿ ಪ್ರದರ್ಶನಕಾರರು ನ್ಯಾಷನಲ್ ಅಸೆಂಬ್ಲಿಯನ್ನು ಸಮೀಪಿಸಿದಂತೆ ದೊಂಬಿ ನಿಯಂತ್ರಣ ಮಾಡುವ ವಿಶೇಷ ಪೋಲೀಸರು ಅಶ್ರುವಾಯು ಮತ್ತು ನೀರಿನ ಗುಂಡು(water cannon)ಗಳನ್ನು ಪ್ರಯೋಗಿಸಿದರು. ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠಿಗಳೊಂದಿಗೆ ಧಾಳಿನಡೆಸಿದಾಗ ಒಬ್ಬ ವಿದ್ಯಾರ್ಥಿ ಮಡಿದು ಇಬ್ಬರು ತೀವ್ರವಾಗಿ ಗಾಯಗೊಂಡರು.

ಸರ್ಕಾರ ಸೋಲೊಪ್ಪಬೇಕಾಯಿತು

ಉದ್ರಿಕ್ತ ವಿದ್ಯಾರ್ಥಿಗಳು ದೊಂಬಿ ಪೋಲೀಸರೊಂದಿಗೆ ಉಗ್ರವಾಗಿ ಹೋರಾಡಿದರು. ಬಸ್ಸೆಕಿನ್ ಸಾವಿನೊಂದಿಗೆ ವಿದ್ಯಾರ್ಥಿಗಳಿಗೆ ಸಾರ್ವಜನಿಕರ ಬೆಂಬಲವು ಅಧಿಕಗೊಂಡು ಸರ್ಕಾರವು ಮತ್ತಷ್ಟು ಮೂಲೆ ಗುಂಪಾಯಿತು. ಕಮ್ಯುನಿಸ್ಟ್ ಪಕ್ಷಕ್ಕೆ ಸಂಬಂಧಿಸಿದ ಅತ್ಯಂತ ದೊಡ್ಡ ಕಾರ್ಮಿಕ ಸಂಘಟನೆ ಸಿ.ಜಿ.ಟಿ. ವಿದ್ಯಾರ್ಥಿಗಳಿಗೆ ತನ್ನ ಬೆಂಬಲ ವ್ಯಕ್ತಪಡಿಸಿತು ಇದೇ ರೀತಿಯಲ್ಲಿ ಪೋಷಕರ ಮಹಾ ಸಂಘವೂ ಬೆಂಬಲ ನೀಡಿತು. ವಿದ್ಯಾರ್ಥಿಗಳು ಮತ್ತೊಂದು ಮೆರವಣಿಗೆಯನ್ನು ಸಂಘಟಿಸಿದರು. ಬಸ್ಸೆಕಿನ್ ಗೌರವಾರ್ಥವಾಗಿ ಶಾಲೆಗಳು ಮತ್ತುಕಛೇರಿಗಳು ಮುಚ್ಚಲ್ಪಟ್ಟವು. ಡಿಸೆಂಬರ್9ರಂದು, ಮೆರವ

[6ನೇ ಪುಟ ನೋಡಿ]

ಅಪರೂಪದ ಮೇಧಾವಂತ ವಿಜ್ಞಾನಿ, ಮೇಘನಾದ ಸಾಹ

'ಜನಹಿತಕ್ಕಾಗಿ ವಿಜ್ಞಾನ' ಎಂದು ತಿಳಿದ ಅನೇಕ ವಿಜ್ಞಾನಿಗಳಲ್ಲಿ ಮೇಘನಾದ ಸಾಹ ಒಬ್ಬರು. 1983ರಲ್ಲಿ ಬಂಗಾಳದ ಒಂದು ಬಡ ಕುಟುಂಬದಲ್ಲಿ ಹುಟ್ಟಿದರು. ಇವರ ಕುಟುಂಬದಲ್ಲಿ ಶಾಲೆ ನೋಡಿದವರು ಇವರೊಬ್ಬರೇ. ನೆರೆಮನೆಯವರ ಅನುಕಂಪದಿಂದಾಗಿ ಇವರ ವಿದ್ಯೆ ಮುಂದುವರಿಯುವಂತಾಯಿತು. ಬ್ರಿಟೀಷರು ಬಂಗಾಳವನ್ನು ಇಬ್ಭಾಗ ಮಾಡಿದರ ವಿರುದ್ಧ ಹೋರಾಡಿದ ಕಾರಣ ಇವರನ್ನು ಶಾಲೆಯಿಂದ ಹೊರ ಹಾಕಲಾಯಿತು. ಇವರು ಬೇರೊಂದು ಶಾಲೆ ಸೇರಿ ಮೆಟ್ರಿಕ್ಯೂಲೇಶನ್ ಮಾಡಿದರು. ನಂತರ ಕಲ್ಕತ್ತಾದ ಪ್ರೆಸಿಡೆನ್ಸಿಕಾಲೇಜ್ ಸೇರಿದರು. ಜಗದೀಶ್‌ಚಂದ್ರ ಬೋಸ್, ಪಿ.ಸಿ.ರೇ ಯಂತ ಅಗ್ರಗಣ್ಯ ವಿಜ್ಞಾನಿಗಳು ಇವರ ಗುರುಗಳಾಗಿದ್ದರು. ಗಣಿತ ಶಾಸ್ತ್ರದಲ್ಲಿ ಎಂ.ಎಸ್ಸಿ ಮಾಡಿದರು. ಆದರೆ, ಇವರ ವಿದ್ಯಾರ್ಥಿ ಜೀವನದ ಚರಿತ್ರೆಯಿಂದಾಗಿ (ಹೋರಾಟ, ಸಂಘಟನೆಯಲ್ಲಿ ಪಾಲ್ಗೊಂಡಿದ್ದರಿಂದ) ಇವರಿಗೆ ಸರ್ಕಾರಿ ಕೆಲಸ ಸಿಗಲಿಲ್ಲ. ಇದರಿಂದಾಗಿ ಇವರು ವಿಜ್ಞಾನದ ಕಾಲೇಜ್‌ನಲ್ಲಿ ಅಧ್ಯಾಪಕರಾಗಿ ಸೇರಬೇಕಾಯಿತು. ಈ ಕಾಲೇಜು ಸರ್ಕಾರದ ಧನಸಹಾಯ ಇಲ್ಲದೇ, ನಮ್ಮ ದೇಶದ ಜನರ ವಂತಿಗೆ ಹಣದಿಂದ ನಡೆಯುತ್ತಿತ್ತು. ಬ್ರಿಟೀಷರು ನಮ್ಮ ದೇಶದಲ್ಲಿ ವಿಜ್ಞಾನ ಕಾಲೇಜುಗಳನ್ನು ತೆರೆಯುತ್ತಿರಲಿಲ್ಲ ಮತ್ತು ಅವುಗಳನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ಭಾರತೀಯರಿಂದಲೇ ನಡೆಸಲ್ಪಟ್ಟ ಈ ಕಾಲೇಜು, ಸಾಹ ಅಂತಹ ಅನೇಕ ಮಹಾವಿಜ್ಞಾನಿಗಳ ಸೇರು ತಾಣವಾಯಿತು. 1920ರಲ್ಲಿ 'ಅಯಾನುಕರಣ' (ionisation) ತತ್ವವನ್ನು ಪ್ರತಿಪಾದಿಸಿದ ಇವರು, ಕೆಲವೇ ದಿನಗಳ ಮಟ್ಟಿಗೆ ವಿದೇಶಕ್ಕೆ ಹೋಗಿ, ತಿರುಗಿ ಅಲಹಬಾದಿಗೆ ಬಂದು 'ವಿಜ್ಞಾನ ಶಾಲೆ'ಯನ್ನು ಸ್ಥಾಪಿಸಿದರು. ಇದರ ನಂತರ ವಿಜ್ಞಾನಕ್ಕೆ ಹಾಗೂ ಸಮಾಜಕ್ಕೆ ಸಂಬಂಧ ಪಟ್ಟ ಅನೇಕ ವಿಚಾರಗಳ ಬಗ್ಗೆ ಇವರು ಅಧ್ಯಯನ ನಡೆಸಿದರು. ನೆರೆ ಬಂದಾಗ, ತಾವೇ ಸ್ವತಃ ನೆರೆ ಪ್ರದೇಶಗಳಲ್ಲಿ ಉಳಿದು ನೆರೆಯ ಅಭ್ಯಾಸ ಮಾಡುತ್ತಿದ್ದರು. ನೆರೆ ಪರಿಹಾರದಲ್ಲಿ ಪಾಲ್ಗೊಳ್ಳುತ್ತಿದ್ದರು. ನದಿಗಳ ಚಲನೆಯನ್ನು ಅಭ್ಯಾಸ ಮಾಡಿ, ನೆರೆ ಬರದಂತೆ ಹೇಗೆ ನದಿಗಳನ್ನು ತಿರುಗಿಸಬೇಕೆಂದು ಸೂಚನೆ ಕೊಟ್ಟರು.

ಸ್ವಾತಂತ್ರ್ಯ ಬಂದ ತರುಣದಲ್ಲೇ ಕಾಂಗ್ರೆಸ್‌ನ ಸಾಮ್ರಾಜ್ಯಶಾಹಿ ಪ್ರಿಯ ನೀತಿಯನ್ನು ವಿರೋಧಿಸಿದ, ಸೋವಿಯತ್ ತಂತ್ರ ಜ್ಞಾನದ ಬಗ್ಗೆ ಆಳವಾದ ಆಸಕ್ತಿಯನ್ನಿಟ್ಟುಕೊಂಡ. ಕಾ. ಮೇಘನಾದಸಾಹ ಅಪರೂಪದ ವಿಜ್ಞಾನಿಗಳಲ್ಲೊಬ್ಬರು.

ನಮ್ಮದೇಶದ ಖನಿಜ ಹಾಗೂ ಸ್ವಾಭಾವಿಕ ಸಂಪತ್ತಿನ ವಿಚಾರ ದೀರ್ಘವಾಗಿ ಅಧ್ಯಯನ ನಡೆಸಿದರು. ಮುಖ್ಯವಾಗಿ ಕಲ್ಲೆಣ್ಣೆ (ಪೆಟ್ರೋಲಿಯಂ) ಹುಡುಕಾಟದ ಮೇಲೆ ವಿಶೇಷ ಅಧ್ಯಯನ ನಡೆಸಿದರು. ಕಲ್ಲೆಣ್ಣೆಯ ತಾಂತ್ರಿಕತೆ ಮಾತ್ರವಲ್ಲ ಅದರ ರಾಜಕೀಯವನ್ನೂ ಅಭ್ಯಾಸ ಮಾಡಿದರು. ಇದರ ಫಲವಾಗಿ 'ಎಣ್ಣೆ ಮತ್ತು ಕಣ್ಣಿಗೆ ಕಾಣದ ಸಾಮ್ರಾಜ್ಯಶಾಹಿ' ಎಂಬ ಪುಸ್ತಕ ಬರೆದರು. ಇದರಲ್ಲಿ ಮೆಕ್ಸಿಕೊ ದೇಶವನ್ನು ಉದಾಹರಣೆ ಆಗಿಟ್ಟುಕೊಂಡು, ಹೇಗೆ ಸಾಮ್ರಾಜ್ಯಶಾಹಿ ಬಡ ದೇಶವನ್ನು ಶೋಷಿಸುತ್ತದೆ ಎಂದು ತೋರಿಸಿಕೊಟ್ಟರು. ಹಿಂದೂ ಪಂಚಾಂಗವನ್ನು ಪರಿಷ್ಕರಿಸಿದರು. ಮೊದಲಿನ ಪಂಚಾಂಗದ ಲೋಪ ದೋಷಗಳನ್ನು ತಿದ್ದುವುದರೊಂದಿಗೆ ಜೋತಿಷ್ಯ ಒಂದು ಮುಕಾಳ ಶಾಸ್ತ್ರ ಎಂದು ಸಾಧಿಸಿ ತೋರಿಸಿದರು. ನಮ್ಮದೇಶದಲ್ಲಿ ಅಣುಶಕ್ತಿಯ ಉತ್ಪಾದನೆಯ ಆಲೋಚನೆ ಬರಬೇಕಾದರೆ

ವಿಜ್ಞಾನ-ತಂತ್ರಜ್ಞಾನ

ಎಷ್ಟೋ ಮುಂಚೆ ಅಣು ವಿಜ್ಞಾನದ ಒಂದು ಗುಂಪನ್ನು ಕಟ್ಟಿ ಬೆಳಸಿದರು. ಇಂಡಿಯನ್ ನ್ಯಾಶನಲ್ ಸಾಯಿನ್ಸ್ ಅಸೋಷಿಯೇಷನ್ ನಂತಹ ಸಂಸ್ಥೆಗಳನ್ನು ಸ್ಥಾಪಿಸಿದರು. ಸೋವಿಯತ್ ದೇಶಕ್ಕೆ ಎರಡು ಬಾರಿ ಭೇಟಿ ಇತ್ತ ಇವರು ಅಲ್ಲಿನ ಸಮಾಜವಾದೀ ಯೋಜನೆಗಳಿಂದ ಬಹಳ ಪ್ರಭಾವಿತರಾಗಿದ್ದರು. 1938ರಲ್ಲಿ ಇವರ ಪ್ರಯತ್ನದಿಂದಲೇ ಕಾಂಗ್ರೆಸ್‌ನಲ್ಲಿ 'ಯೋಜನಾ ಸಮಿತಿ'ಯ ರಚನೆಯಾಯಿತು. ಗಾಂಧೀ ತತ್ವದ ಕಟ್ಟಾ ವಿರೋಧಿಗಳಾಗಿದ್ದರು. ಸಮಾಜವಾದಿ ಯೋಜನಾ ಬದ್ಧ ಆಧುನೀಕರಣವೇ ನಮ್ಮ ಸಮಸ್ಯೆಗೆ ಪರಿಹಾರ ಎಂದು ಹೇಳುತ್ತಿದ್ದರು. ಸ್ವಾತಂತ್ರ್ಯ ಬಂದ ನಂತರ, ಎಡ ಪಂಥೀಯ ಅನೇಕ ವಿಜ್ಞಾನಿಗಳು ನೆಹರು ಅವರ 'ಅವಡಿ ಸಮಾಜವಾದ'ದಿಂದ ಭ್ರಮೆಗೊಳಗಾಗಿದ್ದರೂ, ಸಾಹ ಅವರು ಮಾತ್ರ ನಿಜ ಸ್ಥಿತಿಯನ್ನು ಅರಿತವರಾಗಿದ್ದರು. ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಕಾರಗಳನ್ನು ಅವರು ದಿಟ್ಟವಾಗಿ ವಿರೋಧಿಸಿದರು. (ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದ ಮಹಾಲ ನೋಬಿಸ್ ಇವರೊಂದಿಗ ಕಾಲೇಜ್‌ನಲ್ಲಿ ಒಟ್ಟಿಗೆ ಕಲಿತವರು) ಭೂ ಸುಧಾರಣೆಯನ್ನು ತಾರದೇ ಯೋಜನೆಗಳನ್ನು ರೂಪಿಸಿದ ನೆಹರೂ ಸರ್ಕಾರವನ್ನು ಖಂಡಿಸಿದರು. 1953ರಲ್ಲಿ ಇವರು ಎಡ ಪಕ್ಷಗಳಿಂದ ಬೆಂಬಲಿತರಾಗಿ ಲೋಕಸಭಾ ಸದಸ್ಯರಾಗಿ ಚುನಾಯಿತರಾದರು. ಬಡ ಜನತೆಯ ಬಗ್ಗೆ ಕಾಳಜೀ ಇದ್ದ, ಎಡ ಪಂಥೀಯ ಧೋರಣೆಯ ಈ ಮಹಾ ವಿಜ್ಞಾನಿ 1956ರಲ್ಲಿ ನಿಧನರಾದರು.

"ಮಂಗಳೂರಿನ ನಾಗರಿಕರ ಸಮಸ್ಯೆ ಬಗೆಹರಿಸಿ"

ಪಕ್ಷದ ನೇತೃತ್ವದಲ್ಲಿ ಯಶಸ್ವಿ ಧರಣಿ ಸತ್ಯಾಗ್ರಹ

ಇತ್ತೀಚೆಗೆ ಮಂಗಳೂರು ಮಹಾನಗರ ಪಾಲಿಕೆಯು ಕುಡಿಯುವ ನೀರಿನ ದರವನ್ನು ಶೇಕಡ 50ರಷ್ಟು ಅಭೂತಪೂರ್ವ ಪ್ರಮಾಣದಲ್ಲಿ ಏರಿಸಿದೆ. ಕುಡಿಯುವ ನೀರಿನ ಅಭಾವವು ಈ ವರ್ಷ ತೀವ್ರವಾಗಿದ್ದು, ಕುಡಿಯುವ ನೀರಿಗಾಗಿ ಜನರು ಕೊಡ ಹಿಡಿದು ಊರೆಲ್ಲಾ ಅಲೆದಾಡಬೇಕಾಗಿ ಬಂದಿದೆ. ಮಹಾನಗರ ಪಾಲಿಕೆಯ ಒಳಗೆ ನೂರಾರು ಮನೆಗಳು ನಂಬರ್ ಹಾಕ್ದೆ ಇವೆ. ಇದರಿಂದಾಗಿ ನಿವಾಸಿಗಳಿಗೆ ರೇಶನ್ ಕಾರ್ಡ್ ಮತ್ತು ಇತರ ಸೌಲಭ್ಯಗಳು ದೊರೆಯುತ್ತಿಲ್ಲ. ನಗರ ಒಳ ಚರಂಡಿ ವ್ಯವಸ್ಥೆ ತೀರಾ ಅಪಾಯಕಾರಿ ಹಂತದಲ್ಲಿದ್ದು ಕೆಲವು ಪ್ರದೇಶಗಳಲ್ಲಿ ದುರ್ವಾಸನೆಯಿಂದ ಜೀವಿಸಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಇದೆ. ಒಳ ಚರಂಡಿಯ ಅಪಾಯಕಾರಿ ಪರಿಸ್ಥಿತಿಯನ್ನು ಉಂಟು ಮಾಡಿದೆ. ಜಪ್ಪಿನ ಮೊಗರು, ಹೊಗೆ ಬಜಾರ್ ಇದಕ್ಕೆ ಉದಾಹರಣೆಗಳಾಗಿವೆ. ಇನ್ನು ಕೆಲವು ಕಡೆಗಳಲ್ಲಿ ಒಳಚರಂಡಿಯ ದೋಷದಿಂದ ಕೊಳಕು ಖಾಸಗಿ ಬಾವಿಗಳಿಗೆ ಹರಿಯುತ್ತಿದೆ. ಮಾರ್ಗದ ಬದಿಯಲ್ಲಿ ಚರಂಡಿಯು ಸರಿಯಾಗಿಲ್ಲದೆ ಮಳೆ ನೀರು ಮಾರ್ಗದಲ್ಲಿ ಹರಿದು ಮಾರ್ಗವು ಅಲ್ಲಲ್ಲಿ ಹೊಂಡ ಬಿದ್ದು ನೀರು ತುಂಬಿ ದಾರಿಯಲ್ಲಿ ನಡೆದು ಹೋಗುವವರಿಗೆ ಕಷ್ಟವಾಗಿದೆ. ತಿಂಗಳು ಗಟ್ಲೆಯಾದರೂ ದಾರಿದೀಪ ಉರಿಯದ ಪ್ರದೇಶಗಳಿವೆ.

ಮಂಗಳೂರಿನ ನಾಗರೀಕರನ್ನು ಭಾದಿಸುವ ಈಎಲ್ಲಾ ಸಮಸ್ಯೆಗಳ ಬಗ್ಗೆ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಯ ಮಂಗಳೂರು ತಾಲೂಕು ಸಮಿತಿಯ ನೇತೃತ್ವದಲ್ಲಿ ತಾ.25.6 1987ರಂದು ಮಹಾನಗರ ಪಾಲಿಕೆಯ ಕಛೇರಿಯ ಎದುರು ಸಾಮೂಹಿಕ ಸತ್ಯಾಗ್ರಹ ನಡೆಯಿತು.

ತಾ.25.6.1987ರಂದು ಬೆಳಿಗ್ಗೆ 11 ಗಂಟೆಗೆ ಮಂಗಳೂರು ಟೌನ್ ಹಾಲಿನ ಬಳಿಯಿಂದ ಕಾರ್ಯಕರ್ತರು ಮೆರವಣಿಗೆ ಹೊರಟು ನಗರದ ಪ್ರಮುಖ ಬೀದಿಯಲ್ಲಿ ಸುತ್ತಾಡಿ ಕಛೇರಿಯ ಎದುರು ಧರಣಿ ಕುಳಿತರು.

ಮಂಗಳೂರು ತಾಲೂಕು ಸಮಿತಿಯ ಕಾರ್ಯದರ್ಶಿ, ಮಹಾನಗರ ಪಾಲಿಕೆಯ ಸಿಪಿಐ(ಎಂ) ಕಾರ್ಪೊರೇಟರ್ ಕಾ. ಸದಾಶಿವಶೆಟ್ಟಿ, ಕಾ. ಬಿ.ಮಾಧವ ಕಾ.ಕಮಲಾಕ್ಷ ಮತ್ತು ಕಾ.ಜನಾರ್ಧನ ನ್ಯಾಕ ಇವರುಗಳನ್ನೊಳಗೊಂಡ ನಿಯೋಗವೊಂದು ನಗರ ಪಾಲಿಕೆಯ ಮೇಯರ್ ಮತ್ತು ಕಮೀಷನರ್‌ರವರಿಗೆ ಮನವಿಯೊಂದನ್ನು ಅರ್ಪಿಸಲಾಯಿತು.

ಮನವಿಯಲ್ಲಿ ನಮೂದಿಸಿದ ವಿಷಯಗಳಿಗೆ ಉತ್ತರ ಕೊಡುತ್ತಾ ನೀರಿನ ದರ ಏರಿಸಿದನ್ನು ಕಮೀಷನರು ವಿವರಿಸಿದಾಗ ಶೇಕಡ 50 ರಷ್ಟು ಏರಿಸಿ ನಾಗರೀಕರಿಗೆ ಕುಡಿಯುವ ನೀರಿನಬಗ್ಗೆ ನಗರ ಪಾಲಿಕೆ ಅನ್ಯಾಯ ಮಾಡಿದೆ ಎಂದು ನಿಯೋಗವು ಒತ್ತಿ ಹೇಳಿದಾಗ ಇದನ್ನು ಪರಿಶೀಲಿಸುವ ಭರವಸೆ ನೀಡಿದರು.

ಒಳಚರಂಡಿಯ ಅವ್ಯವಸ್ಥೆಯ ಬಗ್ಗೆ ಒಪ್ಪಿಕೊಂಡ ಮೇಯರು ನಾವು ಈಗಾಗಲೆ ಸಂಬಂಧ ಪಟ್ಟ ಇಲಾಖೆಯನ್ನು ಒತ್ತಾಯಿಸಿದ್ದೇನೆ ಇನ್ನು ಇದರ ಬಗೆ ತುರ್ತು ಕ್ರಮ ಕೈಗೊಳ್ಳುತ್ತೇವೆ ಎಂದರು.

ಸಾವಿರಾರು ಮನೆಗಳಿಗೆ ನಂಬರು ಹಾಕಬಾರದೆಂದು ಆಜ್ಞೆ ಇರುವುದರಿಂದ ನಾವು ಕೆಲಸ ಮುಂದುವರಿಸಲಿಲ್ಲ ಎಂದಾಗ ನೀವು ಈ ಕೆಲಸವನ್ನು ಕೆಲಸವನ್ನು ಮುಂದುವರಿಸಬೇಕೆಂದು ನಿಯೋಗವು ಒತ್ತಾಯಿಸಿತು.

ಇನ್ನಿತರ ವಿಷಯಗಳ ಬಗ್ಗೆ ಬೇಗನೆ ಗಮನ ಹರಿಸುವಆಶ್ವಾಸನೆಯನ್ನಿತ್ತರು.

ಆ ಬಳಿಕ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಕಾ. ಬಿ.ಮಾದವರು ಮೇಯರ್ ಮತ್ತು ಕಮೀಷನರ್ ಕೊಟ್ಟ ಭರವಸೆಗಳನ್ನು ವಿವರಿಸಿ ಈ ಭರವಸೆಯ ಈಡೇರಿಸದಿದ್ದರೆ ಚಳುವಳಿಯನ್ನು ನಾವು ಮುಂದುವರಿಸಬೇಕಾಗಿದೆ. ಈಗ ಬರವಸೆಗಳ ಮೇಲೆ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಹೇಳಿದರು. ಸತ್ಯಾಗ್ರಹದಲ್ಲಿ ಪಾಲ್ಗೊಂಡ ಸದಸ್ಯರುಗಳಿಗೆ ಪಕ್ಷದ ಪರವಾಗಿಧನ್ಯವಾದವನ್ನಿತ್ತು.

ನಗರ ಪಾಲಿಕೆಯು ತಮ್ಮ ಆಶ್ವಾಸನೆಯನ್ನು ಈಡೇರಿಸದಿದ್ದರೆ ಮುಂದಿನ ಚಳುವಳಿಗೆ ಸಿದ್ಧರಾಗಬೇಕೆಂದು ಸತ್ಯಾಗ್ರಹಗಳಿಗೆ ಕರೆ ನೀಡಲಾಯಿತು.

○

ತುಂಗಭದ್ರಾ ನೀರಾವರಿ ರೈತರ ಸಮಸ್ಯೆಗಳು

ಐಕ್ಯ ಹೋರಾಟಕ್ಕೆ ಸಜ್ಜು

ತುಂಗ ಭದ್ರಾ ಎಡದಂಡೆ ಕಾಲುವೆ ಕೆಳಗಿನ ರೈತರು ಹಲವು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದು ಕರ್ನಾಟಕ ಪ್ರಾಂತ ರೈತ ಸಂಘವೂ ಸೇರಿದಂತೆ ಅನೇಕ ರೈತ ಕಾರ್ಮಿಕ ಸಂಘಟನೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಸಮಸ್ಯೆಗಳ ನಿವಾರಣೆಗೆ ಒತ್ತಾಯಿಸಿ ಸರ್ಕಾರದ ಗಮನ ಸೆಳೆಯಲು ಹೋರಾಟಗಳನ್ನು ನಡೆಸಿವೆ. ಆದರೆ ಸರ್ಕಾರ ಈ ಬಗ್ಗೆ ತೀವ್ರ ನಿರ್ಲಕ್ಷ್ಯ ತೋರಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಇರುವ ನೀರಾವರಿ ಪ್ರದೇಶದ ಪ್ರಮುಖ ರೈತ ಸಂಘಟನೆಗಳನ್ನು ಜನತಾ ಕಿಸಾನ್ ಸೆಲ್ ಸೇರಿದಂತೆ ಏಪ್ರಿಲ್ 23ರಂದು ಸಿಂಧನೂರಿನಲ್ಲಿ ಸಭೆ ಸೇರಿಸಿ ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿತ್ತು. ಇವೇ ಸಂಘಟನೆಗಳ ಎರಡನೆಯಸಭೆ ಜೂನ್ 7ರಂದುನಡೆಯಿತು. ಈ ಸಭೆಯಲ್ಲಿ 'ತುಂಗ ಭದ್ರಾ ಎಡದಂಡೆ ಕಾಲುವೆ ಹೋರಾಟ ಸಮನ್ವಯ ಸಮಿತಿ'ಯನ್ನು ರಚಿಸಲಾಯಿತು. ಸಭೆಯಲ್ಲಿ ನಡೆದ ಚರ್ಚೆಯ ನಂತರ ಕೆಳಕಂಡ ಪ್ರಮುಖ ಬೇಡಿಕೆಗಳನ್ನು ಪಟ್ಟಿ ಮಾಡಲಾಯಿತು.

1. ನೀರು ವಿತರಣಾ ಉಸ್ತುವಾರಿಯನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡಬೇಕು.

2. ಆಂಧ್ರ-ಕರ್ನಾಟಕದ ನೀರಿನ ಪಾಲು ಹಂಚಿಕೆಯಲ್ಲಿ ಆಗುತ್ತಿರುವ ಮೋಸವನ್ನು ತಡೆದು ತುಂಗಭದ್ರಾ ಬೋರ್ಡಿಗೆ ಜಾಯಿಂಟ್ ಲಾಕ್ ಪದ್ಧತಿಯನ್ನು ಜಾರಿಗೆ ತಂದು, ಬೋರ್ಡಿನಲ್ಲಿ ಎಲ್ಲಾಪ್ರಮುಖ ಸಾಮೂಹಿಕಸಂಘಟನೆಗಳ ಸದಸ್ಯರನ್ನು ಸೇರಿಸಿ ಕಾವಲು ಸಮಿತಿ ರಚಿಸಬೇಕು.

3. ಕಾಡಾ ಬೋರ್ಡ ಕೋಟಿಗಟ್ಟಲೆ ಹಣವನ್ನು ಪೋಲು ಮಾಡುತ್ತಿದ್ದು, ಬೋರ್ಡನಿಂದ ರೈತರಿಗೆ ಅನುಕೂಲ ದೊರೆಯುವಂತಾಗಲು ಎಲ್ಲಾ ಪ್ರಮುಖ ರೈತ ಸಂಘಟನೆ ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಸದಸ್ಯರನ್ನಾಗಿ ನೇಮಿಸಬೇಕು.

4. ನೀರಾವರಿ ತೆರಿಗೆಯನ್ನು ಏರಿಸಬಾರದು.

5. ಕಾಲುವೆ ತುದಿಯ ರೈತರನ್ನು ಒಳಗೊಂಡಂತೆ ಎಲ್ಲಾ ರೈತರಿಗೂ ಸರಿಯಾಗಿ ನೀರು ದೊರೆಯುವಂತಾಗಲು ಬ್ಲಾಕ್ ಪದ್ಧತಿಯನ್ನು ಜಾರಿಗೊಳಿಸುವುದು.

ಈ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲು ದೀರ್ಘ ಹೋರಾಟವನ್ನು ನಡೆಸಲು ಸಭೆ ತೀರ್ಮಾನಿಸಿತು.

ಹೋರಾಟದ ಮೊದಲ ಹಂತವಾಗಿ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾಪರಿಷತ್ ಅಧ್ಯಕ್ಷರಿಗೆ ಮನವಿ ನೀಡಿ ಚರ್ಚೆ ನಡೆಸುವುದು.

ಎರಡನೇ ಹಂತವಾಗಿ ಕಾಡಾಛೇರ್‌ಮನ್, ಚೀಫ್ ಇಂಜೀನಿಯರ್ ಅವರಿಗೆ ಮನವಿ ಸಲ್ಲಿಸಿ ಸಮಸ್ಯೆಗಳ ಬಗ್ಗೆ ಚರ್ಚಿಸುವುದು.

ಮೂರನೆಯ ಹಂತವಾಗಿ ನೀರಾವರಿ ಸಚಿವರಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿ ಅಂತಿಮ ಚರ್ಚೆ ನಡೆಸುವುದು.

ಈ ಮೇಲಿನ ಕ್ರಮಗಳಿಂದ ಯಾವುದೇ ಪ್ರಯೋಜನ ದೊರೆಯದಿದ್ದಲ್ಲಿ ಕೊನೆಯದಾಗಿ ಒಂದುಬೃಹತ್ ಸಮಾವೇಶವನ್ನು ಕರೆದು ಮುಂದಿನ ತೀವ್ರ ಚಳವಳಿಗೆ ಕರೆ. ನೀಡಬೇಕೆಂದು ಸಭೆ ತೀರ್ಮಾನಿಸಿದೆ.

ಬಳ್ಳಾರಿ ತಾಲ್ಲೂಕು ರೈತರ ಹೋರಾಟ

ದಿನಾಂಕ24-6-87ರಂದು ಬಳ್ಳಾರಿ ತಾಲ್ಲೂಕು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಟಿ.ಗೋಡ್ಯಾಳು ಅಮರಾಪುರ ಗ್ರಾಮದ ಸುಮಾರು 300ಕ್ಕೂ ಹೆಚ್ಚು ಜನ ರೈತರು ಟ್ರಾಕ್ಟರ್‌ಗಳಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಬಳ್ಳಾರಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾ ಪರಿಷತ್ ಕಛೇರಿಗೆ ತೆರಳಿ ಮನವಿಯನ್ನು ಅರ್ಪಿಸಿದರು. ಬೇಡಿಕೆಗಳು, ರೈತ ಸಂಘದ ಘೋಷಣೆಗಳನ್ನು ಕೂಗುತ್ತಿದ್ದ ಮೆರವಣಿಗೆಯ ನೇತೃತ್ವವನ್ನು ತಾಲ್ಲೂಕು ಸಂಚಾಲಕರಾದ ಕಾ|| ಯು. ಬಸವರಾಜ್ ಮತ್ತು ಕಾ|| ಷಣ್ಮುಖಪ್ಪ ವಹಿಸಿದ್ದರು.

ಮನವಿ ಪತ್ರದಲ್ಲಿ 1ವರ್ಷದ ಹಿಂದೆಯೇ "ಪಿಕ್‌ಅಪ್" ಕಟ್ಟಿ ಕಾಲುವೆ ಮೂಲಕ ಮೇಲಿನ ಹಳ್ಳಿಗಳೂ ಸೇರಿದಂತೆ 7-8 ಹಳ್ಳಿಗಳಿಗೆ ನೀರಾವರಿ ಸರಬರಾಜು ಮಾಡಲಿರುವ, ಜೀವನ ಹಳ್ಳಿಯ ಹತ್ತಿರದಲ್ಲಿ ಹರಿಯುವ ಹಳ್ಳಕ್ಕೆ ಕಾಲುವೆಯನ್ನು ಶೀಘ್ರವೇ ನಿರ್ಮಿಸಿ ಈ ವರ್ಷಕ್ಕೆ ನೀರು ಸರಬರಾಜು ಆಗುವಂತೆ ಮಾಡಬೇಕೆಂದು ಒತ್ತಾಯಿಸಲಾಗಿದೆ.

ಈ ಹಿಂದೆ ಅನೇಕ ಸಾರಿ ಮನವಿ ಪತ್ರವನ್ನು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದಾಗ್ಯೂ ಪರಿಣಾಮಕಾರಿ ಕಾರ್ಯ ಜರುಗದೇ ಹೋದದ್ದರಿಂದ,ಅಂತಿಮವಾಗಿ ಮನವಿ ಸಲ್ಲಿಸುತ್ತಿದ್ದೇವೆಂದು ತಿಳಿಸುತ್ತಾ ರೋಸಿಹೋದ ರೈತರು 1-7-87ರೊಳಗಾಗಿ ಸಮಸ್ಯೆ ಬಗೆಹರಿಯಬೇಕೆಂದು ಇಲ್ಲದೇ ಹೋದಲ್ಲಿ 2-7-87ರಂದು ಗೋಡ್ಯಾಳು ಗ್ರಾಮದ ಹತ್ತಿರದ ರಸ್ತೆಯಲ್ಲಿ "ರಸ್ತಾರೋಖೋ" ಚಳುವಳಿ ನಡೆಸಲಾಗುವುದೆಂದು ಎಚ್ಚರಿಸಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲು ಹೋದಾಗ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಂಬಂಧಿಸಿದ ಯಾವುದೇ ಅಧಿಕಾರಿಗಳೂ ಮನವಿ ಪತ್ರವನ್ನು ತೆಗೆದುಕೊಳ್ಳಲು ಇಲ್ಲದೇ ಇರುವುದನ್ನು ರೈತ ಸಂಘ ಖಂಡಿಸಿದೆ.

ಜಿಲ್ಲಾ ಪರಿಷತ್ ಅಧ್ಯಕ್ಷರು ಸಮಸ್ಯೆಯ ಬಗ್ಗೆ ತೀವ್ರ ಗಮನ ಹರಿಸಿ ಬಗೆಹರಿಸುವುದಾಗಿ ತಿಳಿಸಿದ್ದಾರೆ.

ರೈತ ಸಂಘದ ಈ ಜಾಥಾದಲ್ಲಿ, ಪರಮದೇವನ ಹಳ್ಳಿ ಮಂಡಲದ ಅಧ್ಯಕ್ಷರಾದ ದೇವನಗೌಡರು ಹಾಗೂ ಸದಸ್ಯರಾದ ರಾಮಾಂಜಿನಪ್ಪ ಮತ್ತಿತರರು ಪಾಲ್ಗೊಂಡು ಬೇಡಿಕೆಗಾಗಿ ಒತ್ತಾಯಿಸಿದರು.

C.I.T.U.ನಿಂದ ಕಾ|| ಪ್ರಸನ್ನ ಕುಮಾರ್‌ಹಾಗೂ D.Y.F.I.ನಿಂದ ಕಾ|| ಸುರೇಶ್‌ಕುಷ್ಟಗಿ, ಕಾ| ಪಾಂಡು ಬೆಂಬಲ ಸೂಚಿಸಿ ಮಾತನಾಡಿದರೂ ಈ ಪ್ರದರ್ಶನದಲ್ಲಿ ಕಾ|| ನಾಗೂರ್ ಭಾಗ ವಹಿಸಿದ್ದರು.

ಬೀಡಿ ಕಾರ್ಮಿಕರ ಸಂಘಗಳ ವಾರ್ಷಿಕ ಮಹಾಸಭೆಗಳು

ಜಪ್ಪಿನಮೊಗರು :

ಜಪ್ಪಿನ ಮೊಗರು ಬೀಡಿ ಕಾರ್ಮಿಕರ ಸಭೆ ಜೂನ್ 21ರಂದು ನಡೆಯಿತು. ಕಾ|| ಸಂಜೀವ ಸಭಿಕರನ್ನು ಸ್ವಾಗತಿಸಿದರು. ಅಳಪೆ ಪ್ರದೇಶ ಬೀಡಿ ಲೇಬರ್‌ಯೂನಿಯನ್‌ನ ಕಾರ್ಯದರ್ಶಿ ಕಾ|| ಜೆ. ಬಾಲಕೃಷ್ಣ ಶೆಟ್ಟಿ ಮತ್ತು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್‌ನಿನ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯ ಅವರುಗಳು ಬೀಡಿ ಕಾರ್ಮಿಕರು ಸಂಘಟಿತರಾಗಿ ಹೋರಾಡಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಸಭೆಯಲ್ಲಿ 11ಮಂದಿಯನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಕಾ|| ಸುಶೀಲ ಅವರು ಕಾರ್ಯದರ್ಶಿಯಾಗಿ ಚುನಾಯಿತರಾದರು. ಕಾ|| ಇಸ್ಮಾಯಿಲ್‌ರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಪದವು :

ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಸಭೆ ಕಾ|| ಸಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಜೂನ್ 19 ರಂದು ನಡೆಯಿತು. ಸಂಘದ ಕಾರ್ಯದರ್ಶಿ ಕಾ|| ಬಾಬು ದೇವಾಡಿಗರು ಸಭೆಯನ್ನು ಸ್ವಾಗತಿಸಿದರು. ಸಂಘದ ಜೊತೆ ಕಾರ್ಯದರ್ಶಿ ಕಾ|| ಯಮುನಾ ಸಮಿತಿ ಸದಸ್ಯರಾದ ಕಾ|| ಚಿತ್ರಾಪತಿ, ಕಾ|| ವೇದವತಿ, ಕಾ|| ಸೀತಾರತ್ನ ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿ ಮಂಗಳೂರು ಡಿಪೋದ ಭಾರತ್ ಬೀಡಿ ಕಂಟ್ರಾಕ್ಟರುಗಳು ಎಲೆ ಆವರೇಜ್ ಹೆಸರಿನಲ್ಲಿ ಕಾರ್ಮಿಕರಿಂದ ದಂಡ ವಸೂಲಿ ಮಾಡುತ್ತಿರುವ ಕ್ರಮವನ್ನು ತೀವ್ರವಾಗಿ ಖಂಡಿಸಿದರು. ಈ ಬಗ್ಗೆ ಭಾರತ್ ಬೀಡಿ ಮಾಲಿಕರಾದ ಬಿ. ಗಣಪತಿ ಪೈ ಅವರಿಗೆ ಮನವಿ ನೀಡಬೇಕೆಂದು ಸಭೆ ತೀರ್ಮಾನಿಸಿತು. ಮಾಲಿಕರು ಮನವಿಯನ್ನು ಪರಿಗಣಿಸದಿದ್ದರೆ ಭಾರತ್ ಬೀಡಿ ಕಛೇರಿಯ ಎದುರು ಸತ್ಯಾಗ್ರಹ ನಡೆಸಲಿರುವುದಾಗಿ ಸಂಘದ ಪ್ರಕಟಣೆ ತಿಳಿಸಿದೆ.

ಮೂಡಬಿದರೆ :

ಮೂಡಬಿದರೆ ಬೀಡಿ ಕೆಲಸಗಾರರ ಸಂಘದ ಕಛೇರಿಯ ಉದ್ಘಾಟನೆ ಜೂನ್15ರಂದು ನಡೆಯಿತು. ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್‌ನ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯನವರು ಕಛೇರಿಯನ್ನು ಉದ್ಘಾಟಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಬೀಡಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಅವರು ಬಲಿಷ್ಠ ಸಂಘಟನೆಯನ್ನು ಕಟ್ಟಲು ಊರಿನ ಜನರೆಲ್ಲರ ಸಹಕಾರವನ್ನು ಕೋರಿದರು. ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಕಾ|| ಕುಮಾರಿ ರೆಮಣಿ ಸಭಿಕರನ್ನು ಸ್ವಾಗತಿಸಿದರು. ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನಿನ ಖಜಾಂಚಿ ಕಾ|| ಜೆ. ಬಾಲಕೃಷ್ಣ ಶೆಟ್ಟಿ ಧನ್ಯವಾದ ಅರ್ಪಿಸಿದರು.

ಐಕ್ಯರಂಗಕ್ಕೆ
ಚಂದಾದಾರರಾಗಿರಿ

ಭುಗಿಲೆದ್ದಿರುವ ಶಿಕ್ಷಣದ ಎರಡು ಸಮಸ್ಯೆಗಳು

ಶಾಲಾ ಕಾಲೇಜುಗಳು ಆರಂಭವಾಗುತ್ತಿರುವ ಈ ದಿನಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಎರಡು ಸಮಸ್ಯೆಗಳ ಬಗ್ಗೆ ಪ್ರತಿಭಟನೆ ಎದ್ದಿದೆ. ಕ್ಯಾಪಿಟೇಷನ್ ನಿರ್ಮೂಲ ಮಾಡುತ್ತೇವೆ. ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಅನುಮತಿ ನೀಡುವುದೇ ಇಲ್ಲ ಎಂದ ಜನತಾ ಸರ್ಕಾರದ "ನುಡಿಯೊಂದು ನಡೆ ಬೇರೊಂದು" ಎನ್ನುವ ಧೋರಣೆ ಜನರೆಲ್ಲರಿಗೂ ತಿಳಿಯುತ್ತಿದೆ-ಈ ಎರಡು ಪ್ರಶ್ನೆಗಳ ಬಗ್ಗೆ ಓದಿ.

ಇಂಗ್ಲೀಷ್ ಶಿಕ್ಷಣ ಮಾಧ್ಯಮ ಶಾಲೆಗಳು

ಇಂಗ್ಲೀಷ್ ಶಿಕ್ಷಣ ಮಾಧ್ಯಮದ ಶಾಲೆಗಳಿಗೆ ಅನುಮತಿ ನೀಡುವ ಜನತಾ ಸರ್ಕಾರದ ಯೋಚನೆ ಅವರ ಮಂತ್ರಿ ಮಂಡಲದೊಳಗೆ ಮಾತ್ರವಲ್ಲ ರಾಜ್ಯದಲ್ಲಿಯೂ ಚರ್ಚೆಗೆಡೆ ಮಾಡಿದೆ. ಈ ಸಮಯದಲ್ಲಿ ಪ.ಬಂಗಾಳದ ಕ್ರಮವೊಂದು ಅಲ್ಲಿದೊಡ್ಡ ಬೊಬ್ಬೆಗೆ ಹಾಗೂ ದೇಶದಲ್ಲಿ ಎಡರಂಗ ಸರ್ಕಾರದ ವಿರುದ್ಧ ಅಪಪ್ರಚಾರಕ್ಕೆ ಕಾರಣವಾಗಿದುದ್ದನ್ನು ನೆನಪಿಸಿಕೊಳ್ಳಬಹುದು. ಕರ್ನಾಟಕದಲ್ಲಿ ಇಂಗ್ಲೀಷ್ ಮಾಧ್ಯಮದ ಹಣ ಮಾಡುವ ಶಾಲೆಗಳಿಗೆ ಅನುಮತಿ ನೀಡುವ ಬಗ್ಗೆ ವಿರೋಧವೆದ್ದಿದ್ದರೆ, ಪ.ಬಂಗಾಳದಲ್ಲಿ ಪ್ರಾಥಮಿಕ ಶಾಲೆಯಿಂದ ಇಂಗ್ಲೀಷ್ ಭಾಷೆಯ ಕಡ್ಡಾಯ ಕಲಿಕೆಯನ್ನು ಹಿಂತೆಗೆದುಕೊಂಡದ್ದಕ್ಕಾಗಿ ಪ್ರತಿಭಟನೆ ಬಂದಿತ್ತು. ಈ ಸರ್ಕಾರ ಪ್ರಾಥಮಿಕ ಒಂದನೇ ತರಗತಿಗಿಂತ ಪೂರ್ವದಲ್ಲಿಯೇ ಇಂಗ್ಲೀಷ್ ಅನ್ನು ಮಾಧ್ಯಮವಾಗಿ ಹೇರುವುದಕ್ಕೆ ಪ್ರೋತ್ಸಾಹವಾದರೆ, ಅಲ್ಲಿ ಬುದ್ಧಿಜೀವಿಗಳ ಎಲ್ಲಾ ಪ್ರತಿಭಟನೆಯ ನಡುವೆಯೂ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಇಂಗ್ಲೀಷ್ ಕಲಿಕೆಯೇ ಬೇಡ ಎಂಬ ಜನಪರ ತೀರ್ಮಾನ.

ಕೇಂದ್ರ ಸರ್ಕಾರ 'ನೂತನ ಶಿಕ್ಷಣ ನೀತಿ'ಯಲ್ಲಿ ಇಂಗ್ಲೀಷ್ ಹಾಗೂ ಹಿಂದೀ ಮಾಧ್ಯಮವನ್ನು ಹೇರುವುದರ ಬಗ್ಗೆ. ಎಡರಂಗ ಸರ್ಕಾರ ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೋಡಿ.

ಭಾಷಾ ನೀತಿ:

[ಹೊಸ ಶಿಕ್ಷಣ ನೀತಿಯ ಪ್ಯಾರ 1.7.1ರ ಬಗ್ಗೆ]

ಮಗುವಿನ ಮಾತೃ ಭಾಷೆಯೇ ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಿರಬೇಕು.

ಎಲ್ಲರಿಗೂ ಪ್ರವೇಶ ಲಭ್ಯವಿರುವ ಶಾಲೆಗಳ ಮೂಲಕ ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸಬೇಕಾದರೆ,

ಭಾರತದ ಜನತೆಯ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಮೇಲು ವರ್ಗ ಹಾಗೂ ಜನ ಸಾಮಾನ್ಯರನ್ನು ಒಟ್ಟಿಗೆ ತರಬೇಕಾದರೆ,

ಶಿಕ್ಷಣದ ಗುಣಮಟ್ಟವನ್ನು ಎತ್ತರಿಸಬೇಕಾದರೆ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸಬೇಕಾದರೆ, ಮಾತೃಭಾಷೆಯ ಮೂಲಕ ಶಿಕ್ಷಣಅತ್ಯಾವಶ್ಯ. ಪ್ರಾಥಮಿಕ ಮಟ್ಟದಲ್ಲಿ ಕೇವಲ ಒಂದೇ ಭಾಷೆ, ಮಾತೃ ಭಾಷೆಯನ್ನು ಮಾತ್ರ ಕಲಿಸಬೇಕು. ಈ ಕಲಿಕೆ ಹನ್ನೆರಡನೇ ವರ್ಷ (ಪಿ.ಯು.ಸಿ)ದವರೆಗೆ ಮುಂದುವರೆಯಬೇಕು. ಇಂಗ್ಲೀಷನ್ನು ಕೇವಲ ಪ್ರೌಢಶಾಲಾ ಮಟ್ಟದಲ್ಲಿ ಮಾತ್ರ ಕಲಿಸಲಾರಂಭಿಸಬಹುದು.

"ಪಶ್ಚಿಮ ಬಂಗಾಳದಲ್ಲಿ ವಿದ್ಯಾರ್ಥಿಗಳಿಗೆ ಬಂಗಾಲಿ, ಹಿಂದಿ, ಉರ್ದು, ಒರಿಯಾ, ತಮಿಳು, ಅಥವಾ ಇಂಗ್ಲೀಷ್ ಮಾಧ್ಯಮಗಳ ಮೂಲಕ ಶಿಕ್ಷಣ ನೀಡಲಾಗುತ್ತಿದೆ. ಪ್ರೌಢ ಶಾಲೆಯಲ್ಲಿ ಭಾರತದ 14 ಭಾಷೆಗಳಲ್ಲಿ ಯಾವುದನ್ನಾದರೂ ಮೊದಲ ಭಾಷೆಯನ್ನಾಗಿ ಕಲಿಯಲು ಅವಕಾಶವಿದೆ" ಎಂದಿದೆ.

ಪ್ರಾಥಮಿಕ ಶಿಕ್ಷಣದಲ್ಲಿ 5ನೇ ತರಗತಿಯಿಂದಲೇ ಆರಂಭವಾಗುವ ಇಂಗ್ಲೀಷ್ ಭಾಷೆಯ ಹೊರೆಯನ್ನು ತಪ್ಪಿಸಿ ಹಂತ ಹಂತವಾಗಿ ಹಿಂದೆಗೆಯುವ ಪ್ರಯತ್ನದಲ್ಲಿ ಈಗ 7ನೇ ತರಗತಿಯಿಂದ ಮಾತ್ರ ಇಂಗ್ಲೀಷ್ ಭಾಷಾ ಕಲಿಕೆ ಆರಂಭಿಸಲಾಗುತ್ತಿದೆ.

ಇಷ್ಟು ಮಾತ್ರವಲ್ಲ ಪ. ಬಂಗಾಳದ ಎಲ್ಲಾ ಗಿರಿಜನರ ಭಾಷೆಗಳನ್ನೂ ಅಭಿವೃದ್ಧಿಪಡಿಸಿ, ಅವುಗಳಿಗೆ ಲಿಪಿ ರೂಪಿಸಿ ಮಾತೃಭಾಷೆಯಾಗಿ ಕಲಿಸುವ ಮೂಲಕ ಗಿರಿಜನರನ್ನೂ ಶಿಕ್ಷಣದಲ್ಲಿ ಒಳಗೊಳ್ಳಲು ಪ್ರಯತ್ನ ನಡೆಸಿದೆ.

ಪ್ರಾಥಮಿಕ ಹಂತದಲ್ಲಿಯೇ ಮನೆಯಲ್ಲಿ ಹಾಗೂ ಸುತ್ತ ಮುತ್ತ ಮಾತನಾಡುವ ಭಾಷೆಗೆ, ಮಗು ತನ್ನಿಂದ ತಾನೆ ಮಾತನಾಡುವ ಭಾಷೆಗೆ ಬೆಲೆ ಕೊಡದೆ ಬೇರೊಂದು ಭಾಷೆಯನ್ನು ಕಲಿಸುವ ಪ್ರಯತ್ನದಿಂದಾಗಿ, ಈ ಪರಕೀಯ ಭಾಷೆಯ ಮೂಲಕ ಶಿಕ್ಷಣವನ್ನು ನೀಡುವುದರಿಂದಾಗಿ ಭಾಷೆಯ ಮೇಲೆ ಒತ್ತು ಬಿದ್ದು ವಿಷಯವನ್ನೂ ಗ್ರಹಿಸುವುದು ಹಿಂದುಳಿಯುತ್ತಿದೆ. ಹೂರಣವನ್ನು ಕಡೆಗಣಿಸಿ ಹೊರಸಿಪ್ಪೆಗೆ ಜೋತು ಬಿದ್ದಂತಾಗುತ್ತಿದೆ.

ಇಂಗ್ಲೀಷ್ ಮಾಧ್ಯಮದ ಶಿಕ್ಷಣಕ್ಕಾಗಿ ಪೋಷಕರೇ ಬಯಸುತ್ತಿದ್ದಾರೆ. ಪೋಷಕರಿಗೆ ಆಯ್ಕೆಯ ಸ್ವಾತಂತ್ರ್ಯವಿರಬೇಕು ಎಂಬುದೊಂದು ವಾದ. "ಆಯ್ಕೆಯ ಸ್ವಾತಂತ್ರ್ಯ" ಎಂಬ ಈ ಭ್ರಮಾತ್ಮಕ ಕಲ್ಪನೆಯ ಅಡಿಯಲ್ಲಿ ಅನೇಕ ನಿಜವಾದ ಸ್ವಾತಂತ್ರ್ಯಗಳು ಹುದುಗಿಹೋಗಿವೆ. ಈ "ಆಯ್ಕೆ" ಯಾರದು? ನಿಜವಾಗಿ ಪೋಷಕರ ಆಯ್ಕೆಯೆ? ಅಥವಾ ಈ ನಮ್ಮ ವರ್ಗ ಸಮಾಜ ಬಂಡವಾಳಶಾಹಿ ಸಮಾಜ ಅವರ ಮೇಲೆ ಹೇರಿದ್ದೆ?

ಎಲ್ಲಾ ಪೋಷಕರೂ ತಮ್ಮ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಬೇಕು ಎಂದು ಬಯಸುವುದೇಕೆ? ಶಿಕ್ಷಣಕ್ಕೂ ಉದ್ಯೋಗಕ್ಕೂ ಇರುವ ಗಳಸ್ಯ-ಕಂಠಸ್ಯಸಂಬಂಧದಿಂದ ಇಂಗ್ಲೀಷಿಲ್ಲದೆ ಉದ್ಯೋಗವಿಲ್ಲ, ಹೆಚ್ಚು ಉದ್ಯೋಗಾವಕಾಶಗಳಿರುವ ಬಿ.ಇ., ಎಂ. ಬಿ. ಬಿ. ಎಸ್., ಡಿಪ್ಲೋಮಾ ಇತ್ಯಾದಿ ತಾಂತ್ರಿಕ ಶಿಕ್ಷಣವಿಲ್ಲ. ಅಷ್ಟೇ ಏಕೆ, ಒಂದು ಕೈಗಾರಿಕೆಯಲ್ಲಿ ಸಾಮಾನ್ಯ ಕಾರ್ಮಿಕನಾಗಬೇಕಾದರೂ ಕೈಗಾರಿಕಾ ತರಬೇತಿ ಇಂಗ್ಲೀಷ್‌ನಲ್ಲಿಯೇ ಇಂತಹ ಅವಸ್ಥೆಯಿರುವಾಗ ಯಾವ ತಾಯಿ ತಂದೆ ತಾನೇ ಇಂಗ್ಲೀಷ್ ಶಿಕ್ಷಣ ಬಯಸದಿರಲು ಸಾಧ್ಯ. ಸರ್ಕಾರದ ಯಾವುದೇ ಹುದ್ದೆ (ಜವಾನನ ಹುದ್ದೆ ಹೊರತುಪಡಿಸಿ) ಪಡೆಯುವುದಕ್ಕೂ ನಂತರ ಉತ್ತಮವಾಗಿ ಕೆಲಸ ನಿರ್ವಹಿಸುವುದಕ್ಕೂ ಇಂಗ್ಲೀಷ್‌ನ ಜ್ಞಾನವಿಲ್ಲದೆ ಸಾಧ್ಯವಿಲ್ಲ. ಎರಡನೇ ದರ್ಜೆ ಗುಮಾಸ್ತರ ನೇಮಕಾತಿಗೂ ಇಂಗ್ಲೀಷ್‌ನಲ್ಲಿ ಪರೀಕ್ಷೆ ಪಾಸಾದರೇ ಉದ್ಯೋಗ ಎನ್ನುವ ವಾತಾವರಣ ವಿದ್ದರೆ ಮತ್ತೇನೇನು ಮಾಡಲು ಸಾಧ್ಯ.

ಇನ್ನೂ ಖಾಸಗಿ ಉದ್ಯಮಗಳ ವಿಷಯಕ್ಕೆ ಬಂದರೆ ಪಟಪಟನೆ ಎರಡು ಮಾತು ಇಂಗ್ಲೀಷ್ ಉದುರಿಸಿದರೆ ಸಾಕು ಮೊದಲ ಮಣೆ ಇಲ್ಲವಾದರೆ ಕಬ್ಬಿಣ ಎತ್ತುವ ಕೂಲಿ ಕೆಲಸವೇ ಎಂದರೆ ಮತ್ತೇಕೆ ಕನ್ನಡ ಮಾಧ್ಯಮದ ಬಗ್ಗೆ ಜನರು ಆಸಕ್ತಿ ತೋರಿಸಬೇಕು?

ಎಲ್ಲ ಹಂತಗಳಲ್ಲಿ ಕನ್ನಡವನ್ನು ಆಡಳಿತ ಭಾಷೆ ಮಾಡದ, ತಾಂತ್ರಿಕ ಮೊದಲಾದ ಉದ್ಯೋಗ ಪರ ಶಿಕ್ಷಣದಲ್ಲಿ ಕನ್ನಡ ತಾರದ ಸರ್ಕಾರವಿರುವಾಗ ಪೋಷಕರ ಆಯ್ಕೆಯ ಸ್ವಾತಂತ್ರ್ಯ ಎಂಬ ಮಾತಿಗೆ ಅರ್ಥವೇನು? ಊಟ ಮಾಡಲು ಹಣವಿಲ್ಲದಿದ್ದರೆ ಹಸಿವಿನಿಂದಿರುವ ಸ್ವಾತಂತ್ರ್ಯ, ಕನ್ನಡಕ ಕೊಳ್ಳಲು ಹಣವಿಲ್ಲದಿದ್ದರೆ ಕುರುಡಾಗಿಯೇ ಇರುವಸ್ವಾತಂತ್ರ್ಯದಂತೆಯೇ ಇಂಗ್ಲೀಷ್ ಕಲಿಕೆ ಇಲ್ಲದಿದ್ದರೆ ನಿರುದ್ಯೋಗಿಯೇ ಇರಬಹುದಾದ ಸ್ವಾತಂತ್ರ್ಯದಂತೆಯೇ ಪೋಷಕರ ಆಯ್ಕೆ ಸ್ವಾತಂತ್ರ್ಯವೂ ಕೂಡ. ಪೋಷಕರ ಮೇಲೆ ಒತ್ತಡ ಹಾಕುವುದು ನಂತರ ಪೋಷಕರಿಂದ ಒತ್ತಡ ಬರುತ್ತಿದೆ ಎಂದು ನೆಪ ಹೇಳುವುದು.

ಕ್ಯಾಪಿಟೇಷನ್ ವಿರುದ್ಧ ತಿರುಗಿದ ವೈದ್ಯ ವಿದ್ಯಾರ್ಥಿಗಳ ಮುಷ್ಕರ

ಬೆಂಗಳೂರು ಸರ್ಕಾರಿ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು ಹಾಗೂ ಕಿರಿಯ ವೈದ್ಯರುಗಳು ಕ್ಯಾಪಿಟೇಷನ್ ವಿರುದ್ಧದ ಹೋರಾಟ ಕೈಗೆತ್ತಿಕೊಂಡಿದ್ದಾರೆ. ಈ ಪ್ರತಿಭಟನೆ, ಸತ್ಯಾಗ್ರಹಗಳು 'ಜನತಾ'ದ ಹೆಗಡೆಗೂ ಬಿಸಿ ಮುಟ್ಟಿಸುತ್ತಿರುವುದಲ್ಲದೆ ಹುಚ್ಚಾಪಟ್ಟೆ ಖಾಸಗಿ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ ನೀಡುತ್ತಿದ್ದ, ಸರ್ಕಾರ ಕೊಂಚ ಹಿಂದೇಟು ಹಾಕಲು ಸಹಾಯ ಮಾಡಿದೆ.

ಕ್ಯಾಪಿಟೇಷನ್ ಪಿಡುಗು ಹಿಂದೆ ಇದ್ದದ್ದು ಜನತಾದಲ್ಲಿ ಇನ್ನೂ ಹೆಚ್ಚಾದದ್ದು ಹಳೆಯ ಕಥೆ. ಜನತಾ ಅಧಿಕಾರಕ್ಕೆ ಬಂದ ತಕ್ಷಣವೇ ಐದು ಮೆಡಿಕಲ್ ಕಾಲೇಜುಗಳಿಗೆ ಅನುಮತಿ ನೀಡಲಾಯಿತು. ಹೆಗಡೆ ಸರ್ಕಾರದ ಮತದ ಬ್ಯಾಂಕ್‌ಗಳಾಗಿದ್ದ ಈ ಸಂಸ್ಥೆಗಳಿಗೆ ಮೃಷ್ಟಾನ್ನದ ಭಿಕ್ಷೆ. ಮೊದಲು 7ಮೆಡಿಕಲ್ ಕಾಲೇಜು ಇದ್ದದ್ದು ಹೆಗಡೆಯ ಮಂಡಲದ ಕೃಪೆಯಿಂದಾಗಿ ಹದಿನೈದಾಯಿತು. ಒಂದೊಂದು ಜಾತಿಗೆ ಒಂದೊಂದು ಮೆಡಿಕಲ್ ಕಾಲೇಜು ಎಂಬ ಲೆಕ್ಕಾಚಾರ.

ಈಗ ನಡೆಯುತ್ತಿರುವ ಬೆಂಗಳೂರು ಮೆಡಿಕಲ್ ಕಾಲೇಜ್ ಹಾಗೂ ಅಂಬೇಡ್ಕರ್ ಕಾಲೇಜ್ ನಡುವಣ ವಿವಾದದ ಮೂಲ ಇಲ್ಲಿಯೇ ಅಡಗಿದೆ.

ಬೆಂಗಳೂರಿನ ಸರ್ಕಾರಿ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು ಹಾಗೂ ಕಿರಿಯ ವೈದ್ಯರು ಬೆಂಗಳೂರು ಮೆಡಿಕಲ್ ಕಾಲೇಜ್‌ಗಿದ್ದ ಬೌರಿಂಗ್‌ಆಸ್ಪತ್ರೆಯ ಸೌಲಭ್ಯಗಳನ್ನು ಖಾಸಗಿ ಅಂಬೇಡ್ಕರ್ ವೈದ್ಯಕೀಯ ಕಾಲೇಜಿಗೆ ಹಸ್ತಾಂತರ ಮಾಡಿರುವುದನ್ನು ಪ್ರತಿಭಟಿಸಿ ಮುಷ್ಕರ ನಡೆಸುತ್ತಿದ್ದಾರೆ. ಖಾಸಗಿ ಕಾಲೇಜಿಗೆ ಈ ಸೌಲಭ್ಯಗಳು ಹೋದರೆ ಸರ್ಕಾರಿ ಕಾಲೇಜ್ ಮುಚ್ಚುತ್ತದೆ ಎಂಬ ಭಯ ಬೆಂಗಳೂರು ಮೆಡಿಕಲ್ ಕಾಲೇಜ್‌ನವರದ್ದು.

ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಪ್ರಕಾರ ಒಂದು ವೈದ್ಯಕೀಯ ಕಾಲೇಜು ನಡೆಸಲು ಪದವಿ ಶಿಕ್ಷಣಕ್ಕೆ 1:7 ಹಾಸಿಗೆ, ವಿದ್ಯಾರ್ಥಿ ಹಾಗೂ ಸ್ನಾತಕೋತ್ತರ ಶಿಕ್ಷಣಕ್ಕೆ 1:3ಹಾಸಿಗೆ ವಿದ್ಯಾರ್ಥಿ ಸೌಲಭ್ಯಗಳು ಇರಬೇಕು. ಜೊತೆಯಲ್ಲಿಯೇ, 1:1 ವಿದ್ಯಾರ್ಥಿ, ಶಿಕ್ಷಕ ಸೌಲಭ್ಯ ಇರಬೇಕು ಎಂಬುದು ಕಾನೂನು.

ಬೆಂಗಳೂರಿನಲ್ಲಿರುವ ಎಲ್ಲಾ ಮೆಡಿಕಲ್ ಕಾಲೇಜುಗಳಿಗೆ ಹಲವು ಆಸ್ಪತ್ರೆಗಳಲ್ಲಿ ಈ ಸೌಲಭ್ಯಗಳನ್ನು ಕಲ್ಪಿಸಿ ಕೊಡಲಾಗಿದೆ. ಈ ಹಿಂದಿನಿಂದಲೇ ಬೆಂಗಳೂರು ಮೆಡಿಕಲ್ ಕಾಲೇಜ್‌ಗೆ ವಿಕ್ಟೋರಿಯ, ಹಾಗೂ ಬೌರಿಂಗ್ ಆಸ್ಪತ್ರೆಯಲ್ಲೂ, ಕೆಂಪೇಗೌಡ ಮೆಡಿಕಲ್ ಕಾಲೇಜ್‌ಗೆ ಸಂಜಯ ಗಾಂಧಿ ಮೆಮೋರಿಯಲ್ ಹಾಸ್ಪಿಟಲ್‌ನಲ್ಲೂ, ಎಂ.ಎಸ್. ರಾಮಯ್ಯ ಕಾಲೇಜ್‌ಗೆ ಕೆ. ಸಿ. ಜನರಲ್ ಆಸ್ಪತ್ರೆಯಲ್ಲೂ ವ್ಯವಸ್ಥೆ ಮಾಡಲಾಗಿತ್ತು. ಈ ಸೌಲಭ್ಯಕ್ಕಾಗಿ ಕೆಂಪೇಗೌಡ ಮೆಡಿಕಲ್ ಕಾಲೇಜ್ ಸರ್ಕಾರಕ್ಕೆ 25ಲಕ್ಷ ರೂ.

[5ನೇ ಪುಟ ನೋಡಿ]

ಸೌಲಭ್ಯಗಳಿಲ್ಲದ ಕಾರಣ ಇಂಡಿಯನ್ ಮೆಡಿಕಲ್ ಕೌನ್ಸಿಲ್ ವಜಾ ಮಾಡಿದ ಕಾಲೇಜ್‌ಗಳು :

1. ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜ್, ಬೆಂಗಳೂರು
2. ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜ್, ಬೆಂಗಳೂರು
3. ಕೆಂಪೇಗೌಡ ಮೆಡಿಕಲ್ ಕಾಲೇಜ್, ಬೆಂಗಳೂರು
4. ಜೆ.ಎಸ್.ಎಸ್. ಮೆಡಿಕಲ್ ಕಾಲೇಜ್, ಮೈಸೂರು
5. ಆದಿಚುಂಚನಗಿರಿ ಮೆಡಿಕಲ್ ಕಾಲೇಜ್, ನಾಗಮಂಗಲ
6. ಅಲ್. ಅಮೀನ್ ಮೆಡಿಕಲ್ ಕಾಲೇಜ್, ಬಿಜಾಪುರ
7. ಬಿ.ಆರ್.ಡಿ. ಮೆಡಿಕಲ್ ಕಾಲೇಜ್, ಬಿಜಾಪುರ
8. ಬಾಪೂಜಿ ಮೆಡಿಕಲ್ ಕಾಲೇಜ್, ದಾವಣಗೆರೆ
9. ದೇವರಾಜ ಅರಸ್ ಮೆಡಿಕಲ್ ಕಾಲೇಜ್, ಕೋಲಾರ

ಶಾಸಕರ ಹೇಳಿಕೆ

21 ಜನ ಎಂ. ಪಿ., ಶಾಸಕರು ಅಂಬೇಡ್ಕರ್ ಮೆಡಿಕಲ್ ಕಾಲೇಜನ್ನು ಹಾಗೆಯೇ ಎಲ್ಲಾ ಖಾಸಗಿ ಮೆಡಿಕಲ್ ಕಾಲೇಜುಗಳನ್ನೂ ರಾಷ್ಟ್ರೀಕರಿಸಿ ಎಂದು ಕರೆ ನೀಡಿದ್ದಾರೆ, ಅದು ಸ್ವಾಗತಾರ್ಹ ವಿಷಯ. ಆದರೆ ಅದನ್ನು ಅವರು ವಿಧಾನ ಸಭೆಯಲ್ಲಿ ಮತ್ತಿತರ ಎಲ್ಲಾ ವೇದಿಕೆಗಳಲ್ಲಿ ಒತ್ತಾಯಿಸದೇ ಕೇವಲ ಎಲ್ಲಾ ಖಾಸಗಿ ಕಾಲೇಜುಗಳಂತೆ ಲಾಭಕೋರ ಆಡಳಿತ ವರ್ಗವಾಗಿರುವ ಅಂಬೇಡ್ಕರ್ ಆಡಳಿತ ಮಂಡಲಿಯ ರಕ್ಷಣೆಗಷ್ಟೇ ಸೀಮಿತವಾದರೆ ಅದು ಈ ಹೇಳಿಕೆಗೆ ಸಹಿ ಮಾಡಿರುವವರ ಸಂದರ್ಭ ಸಾಧಕತನವನ್ನಷ್ಟೇ ಬಯಲಿಗೆ ತರುತ್ತದೆ.

(4ನೇ ಪುಟದಿಂದ)

ನೀಡಬೇಕಾದ ಕರಾರಿನಂತೆ ಅದನ್ನು ನೀಡುತ್ತಿದೆ. ಆದರೆ ಅಂಬೇಡ್ಕರ್ ಕಾಲೇಜ್ ಇದುವರೆಗೂ 50ಲಕ್ಷ ರೂ.ಗಳ ಸಾಲ ಉಳಿಸಿಕೊಂಡಿದೆ.

1980ರಲ್ಲಿ ಅಂಬೇಡ್ಕರ್ ಕಾಲೇಜ್ ಪ್ರಾರಂಭವಾದಾಗ ಕೇವಲ 5ವರ್ಷಕ್ಕೆ ಮಾತ್ರ ಬೌರಿಂಗ್ ಆಸ್ಪತ್ರೆಯ ಸೌಲಭ್ಯವನ್ನು ಪಡೆಯಲು ಅನುಮತಿ ನೀಡಲಾಗಿತ್ತು. ಐದು ವರ್ಷಗಳ ನಂತರ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಈ ಕಾಲೇಜಿನ ಅವ್ಯವಸ್ಥೆ ನೋಡಿ ಅದಕ್ಕೆ ನೀಡಿದ್ದ ಅನುದಾನ ಹಿಂತೆಗೆದುಕೊಂಡಿತು.

ಈಗ ಜನತಾ ಸರ್ಕಾರ ಅಂಬೇಡ್ಕರ್ ಸಂಸ್ಥೆಯನ್ನು ಸಂತೃಪ್ತಿಗೊಳಿಸಲು ಕ್ಯಾಪಿಟೇಶನ್ ಶುಲ್ಕದ ಮೂಲಕ ನಡೆಯುತ್ತಿರುವ ಈ ಕಾಲೇಜಿಗೆ ಬೌರಿಂಗ್ ಆಸ್ಪತ್ರೆಯನ್ನು ಸಂಪೂರ್ಣವಾಗಿ ಹಸ್ತಾಂತರ ಮಾಡಿದೆಯಲ್ಲದೆ 30 ಜನ ಹಿರಿಯ ಪ್ರಾಧ್ಯಾಪಕ, ವೈದ್ಯರುಗಳನ್ನು ಅಂಬೇಡ್ಕರ್ ಕಾಲೇಜಿಗೆ ಎರವಲು ನೀಡಲಾಗಿದೆ. ಈಗ ಜನತಾದ ಈ ತೀರ್ಮಾನದಿಂದಾಗಿ ಕುತ್ತು ಬಂದಿರುವುದು ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಬೌರಿಂಗ್ ಆಸ್ಪತ್ರೆಯ ಸೌಲಭ್ಯ

ಹರಿಜನ ವಿದ್ಯಾರ್ಥಿಗಳ ಸಂಖ್ಯೆ ಎಲ್ಲಿ ಹೆಚ್ಚು ?

ವಿದ್ಯಾರ್ಥಿಗಳು ನೀಡಿರುವ ಅಂಕೆ ಅಂಶಗಳ ಪ್ರಕಾರ ಹರಿಜನ ವಿದ್ಯಾರ್ಥಿಗಳ ಸಂಖ್ಯೆ :

ಬೆಂಗಳೂರು ಮೆಡಿಕಲ್ ಕಾಲೇಜು
ಪದವಿ ವಿದ್ಯಾರ್ಥಿಗಳು–200
ಸ್ನಾತಕೋತ್ತರ–100
ಅಂಬೇಡ್ಕರ್ ಮೆಡಿಕಲ್ ಕಾಲೇಜು
ಪದವಿ–40

ಈ ಕಾಲೇಜಿಗೆ ತಪ್ಪಿದರೆ ಮತ್ತು ಇಲ್ಲಿನ ವೈದ್ಯ ಪ್ರಾಧ್ಯಾಪಕರು ಅಂಬೇಡ್ಕರ್ ಕಾಲೇಜಿಗೆ ಹೋಗುವಂತಾದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ನಿಯಮಗಳ ಪ್ರಕಾರದಂತೆ 1:3 ಹಾಸಿಗೆ, 1:1 ವಿದ್ಯಾರ್ಥಿ ಪ್ರಾಧ್ಯಾಪಕ ನಿಯಮವನ್ನು ಪಾಲಿಸಲಾಗುವುದಿಲ್ಲ. ಇದರಿಂದಾಗಿ ತಾನೇ ತಾನಾಗಿ ಈ ಸರ್ಕಾರಿ ಕಾಲೇಜ್ ಅನುದಾನ ಕಳೆದುಕೊಂಡು ಬಾಗಿಲು ಹಾಕಬೇಕಾದ ಪರಿಸ್ಥಿತಿ ಬರುತ್ತದೆ.

ಮುಖ್ಯವಾಗಿ ಈ ವಿವಾದ "ಕ್ಯಾಪಿಟೇಶನ್" ಹುಟ್ಟು ಹಾಕಿದ ಸಮಸ್ಯೆ ಎಂಬುದು ನಿಚ್ಚಳವಾಗಿ ಕಾಣುತ್ತದೆ. ಕ್ಯಾಪಿಟೇಶನ್‌ನ ಮೋಹಕ್ಕಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವ ಶಿಕ್ಷಣದ ಸೌಲಭ್ಯಗಳನ್ನು ಕಸಿದುಕೊಳ್ಳುವ ಯೋಜನೆ ಸರ್ಕಾರದ್ದು. ಇದಲ್ಲದೆ ಹಲವು ಲಾಭಿಗಳಿಂದ ಮತ್ತು ತಾವು ಪಡೆದುಕೊಂಡ ದಾನಗಳಿಗಾಗಿ ಈ ಹಣವಂತ ಸಂಸ್ಥೆಗಳನ್ನು ಹೇಗಾದರೂ ಮಾಡಿ ಉಳಿಸಿ ಮುಖ ಉಳಿಸಿಕೊಳ್ಳುವ ಪ್ರಯತ್ನ ಕಂಡುಬರುತ್ತಿವೆ. ಈ ವಿವಾದಕ್ಕೆ ಜಾತೀಯ ಬಣ್ಣ ಬಳಿದು ವಿದ್ಯಾರ್ಥಿಗಳ ಮತ್ತು ಪೋಷಕರ ನಡುವೆ ಗೊಂದಲ ಹುಟ್ಟು ಹಾಕಿ ಹೋರಾಟದ ದಾರಿ ತಪ್ಪಿಸುವ ಪ್ರಯತ್ನ ನಡೆದಿವೆ.

ಮುಖ್ಯವಾಗಿ ಈ ವೈದ್ಯಕೀಯ ವಿದ್ಯಾರ್ಥಿಗಳ ಹೋರಾಟ ಅಭಿನಂದನೀಯವಾಗಿರುವುದು ಅದು ಕೇವಲ ಬೌರಿಂಗ್ ಆಸ್ಪತ್ರೆಗಾಗಿ ಎರಡು ಕಾಲೇಜ್‌ಗಳು ನಡೆಸಿದ ಘರ್ಷಣೆಗೆ ಮಾತ್ರ ಮಿತಿ ಹಾಕದೆ ಈ ವಿವಾದವಲ್ಲದೆ ಇಂತಹ ನೂರಾರು ಸಮಸ್ಯೆಗಳನ್ನು ಹುಟ್ಟು ಹಾಕಬಲ್ಲ ಶಕ್ತಿ ಪಡೆದಿರುವ ಕ್ಯಾಪಿಟೇಶನ್‌ನ ಬುಡಕ್ಕೇ ತಮ್ಮ ಚಳುವಳಿಯನ್ನು ಕೊಂಡೊಯ್ದಿರುವುದು.

ಈ ನಿಲುವನ್ನು ಬೆಂಬಲಿಸಿ ಜೂನ್ 25 ರಂದು ಎಸ್.ಎಫ್.ಐ. ಆದಿಯಾಗಿ ಎಲ್ಲಾ ವಿದ್ಯಾರ್ಥಿ ಸಂಘಟನೆಗಳೂ ಈ ಮುಷ್ಕರದಲ್ಲಿ ಭಾಗವಹಿಸಿದವು. ಕ್ಯಾಪಿಟೇಷನ್–ಡೊನೇಷನ್‌ನ ಮಾರಿಯ ವಿರುದ್ಧ ಜುಲೈ 21ರಂದು ರಾಜ್ಯವ್ಯಾಪಿ ಐಕ್ಯ ಚಳುವಳಿಯನ್ನು ಈ ಸಂಘಟನೆ ಹಮ್ಮಿಕೊಂಡಿವೆ. ○

ಕಾಂಗ್ರೆಸ್ ಎಂಪಿಯೊಬ್ಬರ ಪ್ರಶ್ನೆ

ರಾಜೀವಗಾಂಧಿಯವರ ಬಳಿ ಇದಕ್ಕೆ ಉತ್ತರವಿದೆಯೆ ?

ಮೀರತ್ ಮತ್ತು ದೆಹಲಿ ಕೋಮುವಾದಿ ಶಕ್ತಿಗಳಿಗೆ ಆಳುವ ಪಕ್ಷ ತೋರಿಸುತ್ತಿದ್ದ ಸಲಿಗೆಯ ಬಗ್ಗೆ ನೀವು ಹಿಂದೆ ಮಾಡಿದ ಪ್ರತಿಭಟನೆ ಎಷ್ಟು ದೂರದರ್ಶಿತ್ವದ್ದು ಎಂದು ನೆನಪು ಮಾಡಿವೆ. ಕೋಮು ವಾತಾವರಣ ಇನ್ನಷ್ಟು ಹದಗೆಡುವುದನ್ನು ತಪ್ಪಿಸಲು ಈಗ ಏನು ಮಾಡಬಹುದು ?

ನನ್ನ ಪ್ರಕಾರ, ಇಂದಿನ ಪರಿಸ್ಥಿತಿಗೆ ಹಿಂದೆಂದೂ ಕಾಣದ ಪ್ರಮಾಣದಲ್ಲಿ ಕೋಮುವಾದಿ ಸಿದ್ಧಾಂತದ ಬೆಳವಣಿಗೆ ಕಾರಣ ಅದರಲ್ಲೂ ಕಳೆದ ಎರಡು ವರ್ಷಗಳಲ್ಲಿ ಇದರ ಬೆಳವಣಿಗೆ. ಕೋಮುವಾದಿ ಶಕ್ತಿಗಳಿಗೆ ಕುಮ್ಮಕ್ಕು ಸಿಕ್ಕಿದೆ, ಧೈರ್ಯ ಬಂದಿದೆ. ಇವುಗಳಿಗೆ ಹೆಚ್ಚಿನ ಪ್ರಭಾವ, ಶಕ್ತಿ ಲಭ್ಯವಾಗಿದ್ದು, ಹಿಂದೆಂದೂ ಇಲ್ಲದ ಬಲಾಢ್ಯ ಸ್ಥಿತಿಗೆ ತಲುಪಿವೆ.

ಕಳೆದ ಎರಡು ವರ್ಷಗಳಲ್ಲೇ ಅಂದರೆ ರಾಜೀವ್ ಗಾಂಧಿಯವರ ಆಳ್ವಿಕೆಯಲ್ಲೇ ಯಾಕೆ ಪರಿಸ್ಥಿತಿ ಹದಗೆಟ್ಟಿದೆ ?

ಕೋಮುವಾದ ಯಾವಾಗಲೂ ಇತ್ತು. ಆದರೆ ಕಳೆದ ಎರಡು ವರ್ಷಗಳಲ್ಲಿ, ಕೋಮುವಾದಿ ನಾಯಕರು ತಾವು ಜನರಿಗೆ ನೀಡಿದ ಆಶ್ವಾಸನೆಗಳನ್ನು ಪೂರೈಸಲು ಸಾಧ್ಯವಾಗಿರುವುದರಿಂದ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದಾರೆ. ಹಿಂದೆಯೂ ಜನರನ್ನು ಮರುಳುಗೊಳಿಸಲು ಆಕರ್ಷಕ ಘೋಷಣೆಗಳನ್ನು ಇವರು ಹಾಕುತ್ತಿದ್ದರೂ, ಪೂರೈಸಲು ಸಾಧ್ಯವಾಗುತ್ತಿರಲಿಲ್ಲ.

ನಾನು ಪುನಃ ಒತ್ತಿ ಹೇಳಬಯಸುತ್ತೇನೆ ಕಳೆದ ಎರಡು ವರ್ಷಗಳಲ್ಲಿ, ಎಲ್ಲಾ ಬಣ್ಣದ ಕೋಮುವಾದಿ ನಾಯಕರಿಗೂ ತಮ್ಮ ಆಶ್ವಾಸನೆಗಳನ್ನು ಪೂರೈಸಲು ಸಾಧ್ಯವಾಗಿವೆ. ಇದರಿಂದ ಈ ನಾಯಕರುಗಳಿಗೆ ತಮ್ಮ ಕೋಮಿನಲ್ಲಿ ವರ್ಚಸ್ಸು ಹೆಚ್ಚಿದೆ. ಜನ ಇವರನ್ನು ನಂಬಲಾರಂಭಿಸಿದ್ದಾರೆ.

ಒಂದು ಕೋಮು ಗುಂಪು ಈ ರೀತಿ ಬಲಗೊಂಡಾಗ, ಸರಪಣಿ ಕ್ರಿಯೆ ಆರಂಭವಾಗುತ್ತದೆ. ಈ ಕೋಮಿಗೆ ವಿರುದ್ಧವಾದ ಕೋಮು ಗುಂಪು ಬಲಗೊಳ್ಳುತ್ತದೆ. ಈ ಸರಪಣಿ ಕ್ರಿಯೆಯಿಂದಲೇ ಒಟ್ಟಾರೆಯಾಗಿ ಕೋಮುವಾದ ಭೂತಾಕಾರವಾಗಿ ಬೆಳೆಯಲಾರಂಭಿಸಿದೆ. ಕೋಮುವಾದಿ ನಾಯಕರ ಕಿಮ್ಮತ್ತು, ಬಲ ಹೆಚ್ಚಿದೆ.

ಕಳೆದ ಎರಡು ವರ್ಷಗಳಲ್ಲಿ ಇಷ್ಟು ವೇಗವಾಗಿ ಪರಿಸ್ಥಿತಿ ಬಿಗಡಾಯಿಸಲು ಕಾರಣ ?

ಸರ್ಕಾರ ಕೋಮುವಾದಿ ಶಕ್ತಿಗಳಿಗೆ ಬಹಳಷ್ಟು ರಿಯಾಯಿತಿಗಳನ್ನು ತೋರಿಸಿದೆ. ಸರಕಾರ ಕೋಮುವಾದಿ ನಾಯಕರೊಂದಿಗೆ ಅದರಲ್ಲೂ ವಿಶೇಷವಾಗಿ ಹಿಂಸಾಚಾರ ಮತ್ತು ಕೋಮು ಸ್ವಭಾವದ ಬೆದರಿಕೆಯನ್ನು ಬಳಸುವವರೊಂದಿಗೆ ಹೊಂದಾಣಿಕೆ, ಒಪ್ಪಂದಗಳನ್ನು ಮಾಡಿಕೊಂಡಿದೆ. ಬೆದರಿಕೆಗೆ ಬಗ್ಗಿ ರಿಯಾಯಿತಿ ತೋರಿಸಿದೆ. ಸವಲತ್ತು ಕೊಟ್ಟಿದೆ. ಇದು ಕೋಮುವಾದಿ ಶಕ್ತಿಗಳು ವೇಗವಾಗಿ ಬೆಳೆಯಲು ಸಹಾಯವಾಗಿದೆ.

ಇದಕ್ಕೆ ಕಾರಣ ಮಾತುಕತೆಗಳಲ್ಲಿ ಜಾಣ್ಮೆಯ ಅಭಾವವೇ ಅಥವಾ ದುರ್ಬಲ ಆಡಳಿತದಿಂದಲೇ ?

ವಿಭಜನಾವಾದಿ, ಕೋಮುವಾದಿ ಶಕ್ತಿಗಳೊಂದಿಗೆ ವ್ಯವಹರಿಸುವಲ್ಲಿ ಸರಕಾರ ತನ್ನ ದುರ್ಬಲತೆ ಪ್ರದರ್ಶಿಸಿದೆ ಎಂಬುದು ನಿರ್ವಿವಾದ. ಸರ್ಕಾರ ಪೂರ್ತಿ ಸೋತಿದೆ–ಸಮಸ್ಯೆಯ ಬಗ್ಗೆ ತಿಳುವಳಿಕೆಯ ಪೂರ್ಣ ಅಭಾವದಿಂದ, ಅಥವಾ ದೂರಗಾಮಿ ಧೋರಣೆಯ ಅಭಾವದಿಂದ.

ಅಂದರೆ ನೀವು ಆಳುವ ಪಕ್ಷದೊಳಗೆ, ಭಿನ್ನಮತೀಯರೇ ?

ದೇಶದ ಕೋಮುವಾದಿ ಶಕ್ತಿಗಳನ್ನು ಪುಸಲಾಯಿಸುವ ನಮ್ಮ ಸರ್ಕಾರದ ನೀತಿಯನ್ನು ನಾನು ಒಪ್ಪುವುದಿಲ್ಲ. ಇದಕ್ಕಾಗಿ ನೀವು ನನ್ನನ್ನು ಭಿನ್ನಮತೀಯ ಎಂದು ಕರೆಯಬಹುದು.

ಮೀರತ್‌ಗಳು, ದೆಹಲಿಗಳು ಸಂಭವಿಸಿದಾಗ ಬಿಟ್ಟು ನಾವು ವಿಶೇಷವೇನೂ ಸಂಭವಿಸಿಲ್ಲವೆನ್ನುವಂತೆ ಮರಳಿನೊಳಗೆ ತಲೆ ಹುದುಗಿಸಿ ಕುಳಿತುಕೊಳುವ ಉಷ್ಟ್ರಪಕ್ಷಿಯ ಧೋರಣೆ ವಹಿಸುತ್ತೇವೆ. ನಾವು ವಾಸ್ತವತೆಗೆ, ಸತ್ಯಕ್ಕೆ ಕುರುಡಾಗುತ್ತೇವೆ. ಇದು ನಾಚಿಕೆಗೇಡಿನ ಪರಿಸ್ಥಿತಿ. ಕೋಮು ಹಿಂಸಾಚಾರ ಇನ್ನಷ್ಟು ಹಿಂಸಾಚಾರಕ್ಕೆ ದಾರಿ ಮಾಡಿಕೊಡುತ್ತಾ ಹೋದಂತೆ ನಾವು ಕಣ್ಣು ಮುಚ್ಚಿ ಕುಳಿತಿದ್ದೇವೆ.

ಪೋಲೀಸು, ಮಿಲಿಟರಿಗಳನ್ನು ಸರಿಯಾಗಿ ಉಪಯೋಗಿಸಿ ಬಹುಶಃ ನಾವು ಭೀಕರ ಹಿಂಸಾಚಾರದ ಘಟನೆಗಳನ್ನು ಕೆಲವೊಮ್ಮೆ ನಿಲ್ಲಿಸಬಹುದು. ಕನಿಷ್ಟ ಪಕ್ಷ ಒಂದು ಸ್ಥಳದಲ್ಲಿ. ಆದರೆ ಈ ಹಿಂಸಾಚಾರ ಇನ್ನೊಂದು ಸ್ಥಳದಲ್ಲಿ ಕಾಣಿಸಿಕೊಳ್ಳಬಹುದು. ಕೋಮು ಹಿಂಸಾಚಾರವನ್ನು ಕಾನೂನು ಮತ್ತು ವ್ಯವಸ್ಥೆಯ ಉಲ್ಲಂಘಿಸಿಯಷ್ಟೇ ಎಂಬ ನೀತಿಯಿಂದ ಇನ್ನೂ ಹೆಚ್ಚೇನೂ ಸಾಧ್ಯವಿಲ್ಲ. ಈಗಾಗಲೇ ಬೇರು ಬಿಟ್ಟಿರುವ ಕೋಮುವಾದದ ಶನಿಯ ವಿರುದ್ಧ ನಾವು ಹೋರಾಡುವ ಪಣತೊಡುವವರೆಗೆ ಸಮಸ್ಯೆಗೆ ಪರಿಹಾರವಿಲ್ಲ. ಕೋಮುವಾದದ ವಿಷ ದೇಶದಲ್ಲೆಲ್ಲಾ ಹಬ್ಬುತ್ತಿದೆ. ಸರ್ಕಾರ ದಿನೇ ದಿನೇ ಕೋಮುವಾದಿ ಶಕ್ತಿಗಳ ಒತ್ತಡಕ್ಕೆ ಬಲಿಯಾಗುತ್ತಿದೆ. ದೇಶದ ದೂರಗಾಮಿ ಹಿತಾಸಕ್ತಿಗಳನ್ನು ಬಲಿಕೊಟ್ಟು ತಾತ್ಕಾಲಿಕ ಶಾಂತಿ ಖರೀದಿ ಮಾಡುತ್ತಿದೆ.

ನಾವು ಇಂದು ಕೋಮುವಾದಿ ಶಕ್ತಿಗಳೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇವೆ. ಅವರೊಂದಿಗೆ ಸಖ್ಯ ಬೆಳೆಸಿದ್ದೇವೆ. ಇದು ಬರಿಯ ಕೇರಳದಲ್ಲಿ ಮಾತ್ರವಲ್ಲ, ಇನ್ನೂ ಹಲವಷ್ಟು ಕಡೆ. ಅದರಲ್ಲೂ ಅತ್ಯಂತ ಕೀಳು ಮಟ್ಟದ ಕೋಮುವಾದಿ ಪಕ್ಷಗಳೊಂದಿಗೆ.

ನಾವು ಹೈದರಾಬಾದಿನಲ್ಲಿ 'ಇತ್ತೆಹದುಲ್ ಮುಸ್ಲಿಮೀನ್' ಎಂಬ ಕೋಮುವಾದಿ ಪಕ್ಷದೊಂದಿಗೆ ಸಖ್ಯಬೆಳೆಸಿದ್ದೇವೆ. ನೆಹ್ರೂ ಈ ಪಕ್ಷವನ್ನು "ಫ್ಯಾಸಿಸ್ಟ" "ಕೋಮುವಾದಿ" "ಹಿಂಸಾಚಾರಿಗಳು" ಎಂದೆಲ್ಲಾ ಕರೆದಿದ್ದರು. ಇಂತಹ ಪಕ್ಷ ಕಾಂಗ್ರೆಸ್ ಬೆಂಬಲದಿಂದ ಇಂದು ಹೈದರಾಬಾದ್ ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಅಸ್ತಿತ್ವದಲ್ಲಿದೆ !

ಒಂದು ಕಡೆ ನಾವು ಕೋಮುವಾದದ ವಿರುದ್ಧ ಹೋರಾಟದ ಬಗ್ಗೆ ಮಾತನಾಡುತ್ತೇವೆ. ಇನ್ನೊಂದು ಕಡೆ ನಾವು ಅತ್ಯಂತ ಕೀಳು ಮಟ್ಟದ ಕೋಮುವಾದಿ ಪಕ್ಷಗಳು ನಮ್ಮ ಚುನಾವಣಾ ಮಿತ್ರರು, ನಾವು ಅವರಿಗೆ ಅಧಿಕಾರ ದೊರಕಿಸಿಕೊಳ್ಳಲು ಸಹಾಯ ಮಾಡುತ್ತೇವೆ. ಅವರಿಗೆ ರಾಜಕೀಯ ವರ್ಚಸ್ಸು ದೊರಕಿಸಿ ಕೊಡುತ್ತೇವೆ.

ನಾವು ಕಾಂಗ್ರೆಸ್ಸಿಗರು ಮಾತುವ ಭಾಷಣಗಳೂ ಮತ್ತು ನಮ್ಮ ವರ್ತನೆ, ಕೆ ಸಗಳೂ ತದ್ವಿರುದ್ಧವಾಗಿವೆ. ಆದ್ದರಿಂದ ನಾವು ಕೋಮುವಾದದ ಬಗ್ಗೆ ಮಾತನಾಡಿದರೆ ನಮ್ಮನ್ನು ಜನ ನಂಬುವುದಲ್ಲ ಜನರು ನಮ್ಮನ್ನು ಸಿನಿಕತನದಿಂದ ನಿರ್ಲಕ್ಷಿಸುತ್ತಾರೆ. ಯಾಕೆಂದರೆ ಅವರಿಗೆ ಗೊತ್ತು ನಾವು ಅತ್ಯಂತ ಕೀಳುಮಟ್ಟದ ಕೋಮುವಾದಿ ಗಳೊಂದಿಗೆ ಪಾಲುದಾರರಾಗಿದ್ದೇವೆಂದು.... ಕೋಮುವಾದಿ ಸಿದ್ಧಾಂತ ಮತ್ತು ಹಿಂಸಾಚಾರ ಹೆಡೆಯೆತ್ತಿರುವುದು ಕಾನೂನು ಮತ್ತು ವ್ಯವಸ್ಥೆಯ ವಿಫಲತೆ ಮಾತ್ರವಲ್ಲ, ಕಳೆದ ಎರಡು ವರ್ಷಗಳಲ್ಲಿ ನಮ್ಮ ರಾಜಕೀಯ ನಾಯಕತ್ವದ ವೈಫಲ್ಯವನ್ನೂ ತೋರಿಸುತ್ತದೆ. ಈ ವಾಸ್ತವತೆಯನ್ನು ನಾವು ನಿರೀಕ್ಷಿಸುವಂತಿಲ್ಲ.

ಮೀರತ್ ಗಲಭೆಗಳು ಎಲ್ಲಾ ನಿಜವಾದ ಜಾತ್ಯತೀತರ ಮನಸ್ಸು ಕಲಕಿದೆ. ಆರಿಫ್ ಮುಹಮ್ಮದ್ ಖಾನ್ ಇದಕ್ಕೆ ಅಪವಾದವಲ್ಲ. ಹಲವು ವಾರಗಳ ನಂತರ ಸಹಿಸಲಾಗಿದೆ. ಅವರು ರಾಜೀವ ಗಾಂಧಿಯವರಿಗೆ ಪತ್ರ ಬರೆದಿದ್ದಾರೆ ಕೋಮು ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿದ್ದೀರಿ ಎಂದು ಆಪಾದಿಸಿ. ಈ ಪತ್ರ ಒಂದು ಉರ್ದು ಪದ್ಯದೊಂದಿಗೆ ಕೊನೆಗೊಳ್ಳುತ್ತದೆ.

ಕೋಮುವಾದಕ್ಕೆ, ಶರಿಯತ್‌ಗೆ ಮಣಿದ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಿ ಹೊರಬಂದ ಅರಿಫ್ ಮುಹಮ್ಮದ್ ಖಾನ್ ಕಾಂಗ್ರೆಸ್[ಐ]ನೊಳಗಿದ್ದೇ ಈ ಹೊಲಸು ನೀತಿಯ ವಿರುದ್ಧ ದನಿಯೆತ್ತಿದ್ದಾರೆ....

ನಿನ್ನ ಬಗ್ಗೆ ಮಾತ್ರ

ನಾಯಕನೆ ಹೇಳು,
ನಿನ್ನ ಸುತ್ತ ಬಳಸು ಮಾತುಗಳು
ಬೇಕಿಲ್ಲ ನನಗೆ
ಬಹುದೂರ ಮರಳುಗಾಡಿನಲಿ ಸಾಗಿ ಬಂದ
ನಮ್ಮ ವ್ಯಾಪಾರಿಗಳ ಕಾರವಾನನ್ನು
ಕಳ್ಳರು ದೋಚಿದ್ದು ಹೇಗೆ ?
ನೇರವಾಗಿ ಹೇಳು.
ಕಳ್ಳರ ಬಗ್ಗೆ ನನ್ನದೇನೂ ಪ್ರಶ್ನೆಯಿಲ್ಲ
ನನ್ನ ಪ್ರಶ್ನೆಯೆಲ್ಲಾ ನಾಯಕನೇ
ನಿನ್ನ ಬಗ್ಗೆ ಮಾತ್ರ
ಅಥವಾ ನಾನೇ ಹೇಳಲೆ
ಈ ದರೋಡೆಯ ಹಿಂದಿನ ಕತೆಯ
ಕಾರಣವಿಷ್ಟೇ ನೋಡು
ಕಳ್ಳರೊಡನೆ ಕೂಟ ಬೆಳೆಸಿ ನೀನೆ ದಾರಿ ತೋರಿದೆ
ಕಳ್ಳರ ಬಗ್ಗೆ ನನಗೇನೂ ದೂರಿಲ್ಲ
ನನ್ನ ದೂರೆಲ್ಲಾ ಓ ನಾಯಕನೇ
ನಿನ್ನ ಬಗ್ಗೆ ಮಾತ್ರ

ಇದಕ್ಕೆ ರಾಜೀವ ಗಾಂಧಿಯವರ ಬಳಿ ಉತ್ತರವಿದೆಯೆ ?

ಕಾ|ಕೆ.ಆರ್. ಶ್ರೀಯಾನ್‌ರಿಗೆ ಹಾರ್ದಿಕ ಬೀಳ್ಕೊಡುಗೆ

ಕಮ್ಯುನಿಸ್ಟ್ ಪಾರ್ಟಿ ಆಫ್ ಸೋವಿಯತ್ ಯೂನಿಯನ್‌ನ ಆಹ್ವಾನದ ಮೇರೆಗೆ ಭಾರತದಿಂದ ತೆರಳುವ ಸಿ.ಪಿ.ಐ.(ಎಂ) ಪಕ್ಷದ ನಿಯೋಗದಲ್ಲಿ ಒಬ್ಬರಾಗಿ ಜೂನ್ 27ರಂದು ಪ್ರಯಾಣ ಹೊರಟ ಪಕ್ಷದ ರಾಜ್ಯಸಕ್ರೆಟಾರಿಯಟ್ ಸದಸ್ಯರೂ ಹಾಗೂ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿಯವರೂ ಆದ ಕಾ|| ಕೆ. ಆರ್. ಶ್ರೀಯಾನ್‌ರವರಿಗೆ ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ದಿನಾಂಕ 25-6-87ರಂದು ಹಾರ್ದಿಕ ಬೀಳ್ಕೊಡುಗೆ ನೀಡಲಾಯಿತು. ರಾಜ್ಯ ಮುಖಂಡರುಗಳಾದ ಕಾ|| ಸೂರ್ಯನಾರಾಯಣರಾವ್, ವಿ. ಜೆ. ಕೆ. ನಾಯರ್, ಸಿ. ನಂಜುಂಡಪ್ಪ, ಎನ್. ಕೆ. ಉಪಾಧ್ಯಾಯ, ರಾಜ್ಯ ಸಮಿತಿ ಸದಸ್ಯರು, ಜಿಲ್ಲಾ ಮುಖಂಡರು ಹಾಗೂ ಪಕ್ಷದ ಸಂಗಾತಿಗಳು ಪಾಲ್ಗೊಂಡು ಅವರನ್ನು ಬೀಳ್ಕೊಟ್ಟರು.

ಕಣ್ಣಾನೂರು ಎ. ಕೆ. ಜಿ. ಆಸ್ಪತ್ರೆ

ಸಿ. ಎಂ. ಪಿ. ಯಿಂದ ಮತ್ತೆ ಪಕ್ಷದ ವಶಕ್ಕೆ

[ದೇಶಾಭಿಮಾನಿಯಿಂದ]

ಇತ್ತೀಚೆಗೆ ಕೇರಳದ ವಿಧಾನ ಸಭೆಯಲ್ಲಿ ತನ್ನ ಗೂಂಡಾಗಿರಿಯನ್ನು ಪ್ರದರ್ಶಿಸಲು ಹೋಗಿ ಪೆಟ್ಟು ತಿಂದುದಲ್ಲದೆ ವಿಧಾನ ಸಭೆಯಿಂದ ಸಸ್ಪೆಂಡ್ ಆದ ಎಂ.ವಿ. ರಾಘವನ್‌ರ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ್ದೀರಿ.

ಪಕ್ಷದಿಂದ ಶಿಸ್ತು ಕ್ರಮಕ್ಕೊಳಗಾಗಿ ಒಂದು ವರ್ಷ ಸಸ್ಪೆಂಡ್‌ಆದ ಕೂಡಲೇ ಪಕ್ಷದ ಅಭಿಮಾನಿಗಳು ಸದಸ್ಯರುಗಳಿಂದ ಷೇರು ಧನ ಹಾಗೂ ವಂತಿಗೆಗಳನ್ನು ಸ್ವೀಕರಿಸಿ ನಿರ್ಮಿಸಿದ, ಪಕ್ಷದ ಕಣ್ಮಣಿ ಎ.ಕೆ.ಜಿ. ಯವರ ಸ್ಮಾರಕದ ಆಸ್ಪತ್ರೆಯ ಆಡಳಿತವನ್ನು ಪಕ್ಷಕ್ಕೆ ವಹಿಸಬೇಕೆಂದು ಸ್ಪಷ್ಟ ನಿರ್ದೇಶನ ನೀಡಿದ್ದರೂ ಅದನ್ನು ಉಲ್ಲಂಘಿಸಿದ್ದರು ರಾಘವನ್. ಇಡೀ ಆಸ್ಪತ್ರೆ ತಮ್ಮದೇ ಸ್ವಂತ ಸ್ವತ್ತೆಂಬಂತೆ ತಮ್ಮ ನಿರ್ಮಾಣವೆಂಬಂತೆ ವರ್ತಿಸಿದ್ದರು. ಇತ್ತೀಚೆಗೆ ಈ ಆಸ್ಪತ್ರೆಯ ಆಡಳಿತ ನಿರ್ವಹಿಸುವ ಸಹಕಾರಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ವರ್ಗವಂಚಕನಾದ ಎಂ ವಿ. ರಾಘವನ್ ಅಪಮಾನಕರ ರೀತಿಯಲ್ಲಿ ಸೋಲನ್ನಪ್ಪಿದ್ದೇ ವಿಧಾನ ಸಭೆಯಲ್ಲಿ ಆತ ಪ್ರದರ್ಶಿಸಿದ ಕ್ರೋಧಕ್ಕೆ ಕಾರಣ.

ಈ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು 800ಕ್ಕೂ ಹೆಚ್ಚು ಮತಗಳನ್ನು (ಓ.ಭರತನ್,ಶಾಸಕರು,818) ಎಂ.ವಿ. ರಾಘವನ್ ಮತ್ತು ಅವನ ಸಂಗಡಿಗರು 176ರಿಂದ 200ಮತಗಳನ್ನು(ಎಂ.ವಿ. ರಾಘವನ್–200) ಪಡೆದು 600 ಮತಗಳ ಅಂತರದಿಂದ ಸೋತರು. ಈ ರೀತಿಯ ಅಪಮಾನಕರ ಸೋಲು ಸಂಭವಿಸಿದನ್ನು ನಿರೀಕ್ಷಿಸಿದ್ದ ರಾಘವನ್‌ಹೈಕೋರ್ಟ್‌ಹಾಗೂ ಜಿಲ್ಲಾಧಿಕಾರಿಗಳ ಮಧ್ಯ ಪ್ರವೇಶದಿಂದ ಚುನಾವಣೆ ನಡೆಯದಂತೆ ಮಾಡಲು ಎಲ್ಲಾ ಪ್ರಯತ್ನ ನಡೆಸಿದರು. ಅದು ಸಫಲವಾಗದಾಗ ಚುನಾವಣೆಯಲ್ಲಿ ಮತ ನೀಡಲು ಬಂದವರ ಮೇಲೆ ಕೊನೆಗೆ ಚುನಾವಣಾಧಿಕಾರಿಯ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದರು.

ಇದೆಲ್ಲದರ ಮೇಲೆ ಎ.ಕೆ.ಜಿ. ಸ್ಮಾರಕ ಆಸ್ಪತ್ರೆಯನ್ನು, ಮುಸ್ಲಿಂ ಲೀಗ್ ಜೊತೆ ಸೇರಿ 'ಒಫಾಕಿ' ಆಸ್ಪತ್ರೆಯಾಗಿ ಪರಿವರ್ತಿಸುವ ಯೋಜನೆಯಿತ್ತು ಎಂದು ಕೂಡ ತಿಳಿದು ಬಂದಿದೆ.

ಈ ಚುನಾವಣೆಯ ನಂತರ ಅಧ್ಯಕ್ಷರಾಗಿ ಚುನಾಯಿತರಾದ ಓ. ಭರತನ್ ಹಾಗೂ ಉಪಾಧ್ಯಕ್ಷರಾದ ಸಿ.ಪಿ.ನಾರಾಯಣನ್‌ರವರೂ ಸೇರಿದಂತೆ ಇಡೀ ನಗರದಲ್ಲಿ ಮೆರವಣಿಗೆ ನಡೆಯಿತು. ಈ ವಿಜಯ ಇಡೀ ನಗರದಲ್ಲಿ ಜನರೆಲ್ಲರ ಸಂತೋಷಗಳಿಗೆ ಕಾರಣವಾಯಿತು. ಜನರು ರಸ್ತೆಯ ಇಕ್ಕೆಲಗಳಲ್ಲಿ ನಿಂತು ಅಭಿನಂದಿಸಿದರೂ, ಒಂದು ಆಸ್ಪತ್ರೆಯೊಂದರ ಆಡಳಿತಕ್ಕಾಗಿ ನಡೆದ ಚುನಾವಣೆ ಇಡೀ ನಗರದಲ್ಲಿ ಈ ರೀತಿಯ ಸ್ವಾಗತ ದೊರೆತದ್ದು ಇದೇ ಮೊದಲು ಎಂದು ದೇಶಾಭಿಮಾನಿ ಪತ್ರಿಕೆ ವರದಿ ಮಾಡಿದೆ. ●

ಆಂಧ್ರ ಪ್ರದೇಶ : ಸಿ. ಪಿ. ಐ. ನ ಇಬ್ಬಂದಿತನ

ಎಲ್ಲರಿಗೂ ಗೊತ್ತಿರುವಂತೆ ಸಿ.ಪಿ.ಐ. ಕೇರಳದಲ್ಲಿ ಜನತಾ ಹಾಗೂ ಕಾಂಗ್ರೆಸ್ (ಎಸ್)ನೊಂದಿಗೆ ಸರ್ಕಾರದಲ್ಲಿ ಪಾಲ್ಗೊಂಡಿದೆ. ಕರ್ನಾಟಕದಲ್ಲಿ ಜನತಾ ಪಕ್ಷದೊಡನೆ, ಇತ್ತೀಚೆಗೆ ಹರ್‍ಯಾಣಾದಲ್ಲಿ ಲೋಕದಳ(ಬಿ) ಜತೆ ಸೇರಿಕೊಂಡು ಚುನಾವಣೆಗಳಲ್ಲಿ ಸ್ಪರ್ಧಿಸಿದೆ. ಆದರೆ ಅದೇ ಸಿ.ಪಿ.ಐ. ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್(ಐ)ನ ಗುತ್ತೇದಾರಿಕೆಯನ್ನು ಮುರಿಯಲು ತೆಲುಗು ದೇಶಂ ಪಕ್ಷದೊಡನೆ ಸಹಕರಿಸುವುದನ್ನು "ವರ್ಗ ಶಾಮೀಲು" ಎಂದು ದೂಷಿಸುತ್ತಿದೆ. ಕಳೆದ ವಾರದ ಸಿ. ಪಿ. ಐ ನ "ನ್ಯೂಏಜ್" ನಲ್ಲಿ ಈ ಬಗ್ಗೆ ಒಂದು ಲೇಖನ ಪ್ರಕಟವಾಗಿದೆ.

ಡಿಸೆಂಬರ್ 1984ರವರೆಗೂ, ಸಿ.ಪಿ.ಐ. ತೆಲುಗು ದೇಶಂ ಒಂದು ಪ್ರಗತಿಪರ ಮಿತ್ರ ಪಕ್ಷ ಎಂದು ಪರಿಗಣಿಸಿತ್ತು ಎಂಬುದನ್ನು ಬಹಳ ಜನ ಇನ್ನೂ ಮರೆತಿರಲಿಕ್ಕಿಲ್ಲ. ಖಮ್ಮಂ ಲೋಕ ಸಭಾ ಕ್ಷೇತ್ರವನ್ನು ತೆಲುಗು ದೇಶಂ ಸಿ.ಪಿ.ಐ.ಗೆ ಬಿಟ್ಟುಕೊಟ್ಟಾಗ ಅದರ ಈ "ಪ್ರಗತಿಪರ"ತೆ ತಾರಕಕ್ಕೇರಿತ್ತು. ಆದರೆ ಚುನಾವಣೆಯ ಫಲಿತಾಂಶ ಖಮ್ಮಂ ಜಿಲ್ಲೆಯಲ್ಲಿ ಸಿ.ಪಿ.ಐ (ಎಂ) ನಿಜವಾಗಿ ಹೆಚ್ಚು ಪ್ರಭಾವಶಾಲೀ ಪಕ್ಷ ಎಂಬುದನ್ನು ತೋರಿಸಿಕೊಟ್ಟಿತು. ಇದರ ಫಲವಾಗಿ 1985ರ ವಿಧಾನ ಸಭಾ ಚುನಾವಣೆಗಳಲ್ಲಿ ಖಮ್ಮಂ ಜಿಲ್ಲೆಯ ನಾಲ್ಕು ಸ್ಥಾನಗಳಲ್ಲಿ ಸಿ.ಪಿ.ಐ.(ಎಂ) ಸ್ಪರ್ಧಿಸಲು ಹಾಗೂ ಕೇವಲ ಒಂದರಲ್ಲಿ ಸಿ.ಪಿ.ಐ. ಸ್ಪರ್ಧಿಸಲು ತೆಲುಗುದೇಶಂ ಒಪ್ಪಿಕೊಂಡಿತು. ಅಂದಿನಿಂದಲೇ ಸಿ.ಪಿ.ಐ. ತೆಲುಗುದೇಶಂನಲ್ಲಿ ಎಲ್ಲಾ ತರದ "ಪ್ರತಿಗಾಮೀ ಲಕ್ಷಣ" ಗಳನ್ನು ಕಾಣಲಾರಂಭಿಸಿತು. ಈಗ ಅದಕ್ಕೆ 'ತೆಲುಗು ದೇಶಂ' ಪಕ್ಷ ಕಾಂಗ್ರೆಸ್(ಐ)ಗಿಂತಲೂ ಹೆಚ್ಚು ಪ್ರತಿಗಾಮಿ. ಆದ್ದರಿಂದ ಸಿ.ಪಿ.ಐ.(ಎಂ) ತನ್ನ ನಿಲುವನ್ನು ಬದಲಿಸಬೇಕು ಎಂದು ಅದರ ಸಲಹೆ! ಇದಕ್ಕೆ ಸಿ.ಪಿ.ಐ.(ಎಂ) ಹೇಳುವುದು ಇಷ್ಟೆ– ಕಾಂಗ್ರೆಸ್ (ಐ)ಗೆ ಸಾಧ್ಯವಾದಷ್ಟು ವ್ಯಾಪಕ ಪ್ರತಿರೋಧ ರಚಿಸುವ ಹನ್ನೆರಡನೇ ಅಧಿವೇಶನದ ರಾಜಕೀಯ ನಿಲುವೆ ಎಷ್ಟು ಸರಿಯಾದುದೆಂದು ಪಶ್ಚಿಮ ಬಂಗಾಳ ಮತ್ತು ಕೇರಳ ಈಗಾಗಲೇ ತೋರಿಸಿಕೊಟ್ಟಿವೆ ಆದ್ದರಿಂದ ಸಿ.ಪಿ.ಐ. ತನ್ನ ಕಾಂಗ್ರೆಸ್(ಐ) ಪರ ವರ್ತನೆಯನ್ನು ತ್ಯಜಿಸಿ ಕಾಂಗ್ರೆಸ್ (ಐ) ವಿರುದ್ಧ ಸಾಧ್ಯವಾದಷ್ಟು ವ್ಯಾಪಕ ಪ್ರತಿರೋಧ ನಿರ್ಮಿಸುವಲ್ಲಿ ಸಿ.ಪಿ.ಐ.(ಎಂ) ಹಾಗೂ ಜಾತ್ಯತೀತ ವಿರೋಧ ಪಕ್ಷಗಳೊಡನೆ ಸೇರಿಕೊಳ್ಳುವುದು ಒಳ್ಳೆಯದು.

ಎಸ್. ಎಫ್. ಐ. ಸುದ್ದಿಗಳು

ಅಧ್ಯಯನ ಶಿಬಿರ

ಎಸ್.ಎಫ್.ಐ.ನ ಸುಮಾರು 150 ಮಂದಿ ಪ್ರಮುಖ ಕಾರ್ಯಕರ್ತರಿಗೆ ರಾಜ್ಯ ಮಟ್ಟದ ಅಧ್ಯಯನ ಶಿಬಿರವು ಜುಲೈ 22ರಿಂದ 26ರವರೆಗೆ ಬಳ್ಳಾರಿ ಜಿಲ್ಲೆಯ ಹಂಪೆಯಲ್ಲಿ ಜರುಗುವುದು ಖಚಿತವಾಗಿದೆ. ಆಗಸ್ಟ ಮೊದಲ ವಾರದಲ್ಲಿ ನಡೆಯುವುದಾಗಿ ಐಕ್ಯರಂಗದಲ್ಲಿ ಈ ಹಿಂದೆ ಪ್ರಕಟವಾಗಿದ್ದು ದಿನಾಂಕಗಳ ಬದಲಾವಣೆಯನ್ನು ಗಮನಿಸಬೇಕಾಗಿ ವಿನಂತಿ.

ಜೂನ್ 21ರಂದು ಹೊಸಪೇಟೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗಿದ್ದು ಪುರಸಭಾಧ್ಯಕ್ಷರಾದ ಶ್ರೀ ಬಿ. ಪಂಪಾಪತಿಯವರು ಗೌರವ ಅಧ್ಯಕ್ಷರಾಗಿ, ಶ್ರೀ ವೈ. ಭೀಮಸೇನಾಚಾರ್ ಕಾರ್ಯಾಧ್ಯಕ್ಷರಾಗಿ, ಎಸ್.ವೈ. ಗುರುಕಾಂತ್ ಕಾರ್ಯದರ್ಶಿಯಾಗಿ ಮತ್ತು ಎಲ್. ಮಂಜುನಾಥ್‌ರವರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಗಿದೆ.

ವಿದ್ಯಾರ್ಥಿಗಳ ಅನಿಶ್ಚಿತ ಪರಿಸ್ಥಿತಿ

ಈಗಾಗಲೇ ಪರೀಕ್ಷೆಗೆ ಕುಳಿತಿದ್ದು ವಿದ್ಯಾರ್ಥಿಗಳ ಪಿ.ಯು.ಸಿ. ಫಲಿತಾಂಶಗಳು ಪ್ರಕಟವಾಗಿದೆ. ಆದರೆ ತಾಂತ್ರಿಕ ವೈದ್ಯಕೀಯ ವ್ಯಾಸಂಗಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗಾಗಿ ನಡೆಸಲಾಗಿರುವ ಪ್ರವೇಶ ಪರೀಕ್ಷೆಯ ಫಲಿತಾಂಶ ಇದುವರೆವಿಗೂ ಪ್ರಕಟವಾಗಿಲ್ಲ. ಈ ಮಧ್ಯೆ ಬೆಂಗಳೂರು ವಿಶ್ವವಿದ್ಯಾನಿಲಯದವರು ಬಿ.ಎಸ್ಸಿ ಮತ್ತು ಇತರ ಪದವಿ ಪಡೆಯಲು ಪ್ರವೇಶದ ದಿನಾಂಕವನ್ನು 7-7-87 (ದಂಡ ಸಹಿತ) ಕೊನೆಯ ದಿನವೆಂದು ನಿಗದಿಗೊಳಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಅನಿಶ್ಚಿತ ಪರಿಸ್ಥಿತಿಯುಂಟಾಗಿ, ವಿದ್ಯಾರ್ಥಿಗಳು ಮತ್ತು ಅವರ ಪಾಲಕರು ಗಾಬರಿಗೊಂಡು ಏನೂ ಮಾಡಲು ತೋಚದೆ ಇರುವಂತಹ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ ಆದ್ದರಿಂದ ಈ ಕೂಡಲೇ ಸರ್ಕಾರದವರು ತಾಂತ್ರಿಕ, ವೈದ್ಯಕೀಯ ಪ್ರವೇಶ ಪರೀಕ್ಷೆಗಳಿಗೆ ಕುಳಿತಿರುವ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು ಅಥವಾ ಬಿ.ಎಸ್ಸಿ ಸೇರ ಬಯಸುವ ಪ್ರವೇಶ ದಿನಾಂಕವನ್ನು (ಅಂತಿಮ) ಮುಂದೂಡಬೇಕೆಂದು ಎಸ್.ಎಫ್.ಐ. ತುಮಕೂರು ಶಾಖೆ ಸರ್ಕಾರವನ್ನು ಒತ್ತಾಯಿಸಿದೆ.

ಇದಲ್ಲದೆ ಪಿ.ಯು.ಸಿ. ಪರೀಕ್ಷೆಗಾಗಿ ಹಾಜರಿದ್ದ ವಿದ್ಯಾರ್ಥಿಗಳಿಗೆ ಪಠ್ಯೇತರ ವಿಷಯದ ಬಗ್ಗೆ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೇಳಿ ನಂತರ ತಾನೇ ಮಾಡಿದ ತಪ್ಪಿಗಾಗಿ ಹೆಚ್ಚುವರಿ 8 ಅಂಕಗಳನ್ನು ಕೊಟ್ಟು ತಲೆ ತೊಳೆದುಕೊಂಡಿದೆ. ಈ ರೀತಿಯ ಒಂದಲ್ಲಒಂದು ಅವ್ಯವಸ್ಥೆಗಳಿಂದ ಪ್ರತಿ ವರ್ಷವೂ ವಿದ್ಯಾರ್ಥಿಗಳನ್ನು ಮತ್ತು ಪೋಷಕರುಗಳನ್ನು ಪರಿತಪಿಸುವಂತೆ ಮಾಡುತ್ತಿರುವ ಪರೀಕ್ಷಾ ಮಂಡಳಿಯ ಬೇಜವಾಬ್ದಾರಿ ಕ್ರಮವನ್ನು ವಿದ್ಯಾರ್ಥಿ ಫೆಡರೇಶನ್ ಖಂಡಿಸುತ್ತದೆ. ಎಂದು ಪ್ರಕಟನೆ ತಿಳಿಸಿದೆ.

ರ‍್ಯಾಗಿಂಗ್ ಖಂಡನೆ

ಇತ್ತೀಚೆಗೆ ಬೆಂಗಳೂರಿನ ಎಂ.ಎಸ್ ರಾಮಯ್ಯ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಮರುಕಳಿಸಿದ ರ‍್ಯಾಗಿಂಗ್ ಪ್ರಕರಣವನ್ನು ಎಸ್.ಎಫ್.ಐ ಶಾಖೆಯು ತೀವ್ರವಾಗಿ ಖಂಡಿಸಿದೆ. ಇದೇ ಸಂದರ್ಭದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳ ಬಿಡುಗಡೆಗೆ ಒತ್ತಾಯಿಸಿದೆ ಪೋಲೀಸ್ ದೌರ್ಜನ್ಯದ ವಿರುದ್ಧ ಮರುದಿನ ನಡೆದ ಮುಷ್ಕರದ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳ ಮೇಲೆ ದುಷ್ಕರ್ಮಿಗಳು ನಡೆಸಿದ ಹಲ್ಲೆಯ ಪರಿಣಾಮವಾಗಿ ವಿದ್ಯಾರ್ಥಿಗಳ ನಡುವೆ ವೈಷಮ್ಯಕ್ಕೆ ಕಾರಣವಾಗಿರುವುದರ ಬಗ್ಗೆ ಎಸ್.ಎಫ್.ಐ. ತನ್ನ ವಿಷಾದವನ್ನು ವ್ಯಕ್ತ ಪಡಿಸಿದೆ ವಿದ್ಯಾರ್ಥಿಗಳು ಜಾತಿ, ಭಾಷೆ, ಪ್ರಾದೇಶಿಕ ಸಂಕುಚಿತ ಭಾವನೆಗಳ ಪ್ರಚೋದನೆಗೊಳಗಾಗದೆ ಐಕ್ಯತೆಯನ್ನು ಕಾಪಾಡಬೇಕೆಂದು ಎಸ್.ಎಫ್.ಐ.ನ ಎಂ.ಎಸ್.ಆರ್.ಐ.ಟಿ. ಶಾಖೆಯ ಸಂಚಾಲಕರಾದ ಜಿ.ಟಿ.ರಾವ್ ಹೇಳಿಕೆ ನೀಡಿದ್ದಾರೆ. ಕರಪತ್ರಗಳು ಮತ್ತು ಭಿತ್ತಿ ಚಿತ್ರಗಳ ಮೂಲಕ ವಿದ್ಯಾರ್ಥಿಗಳ ಐಕ್ಯತೆಯ ರಕ್ಷಣೆಗಾಗಿ ಪ್ರಚಾರ ಚಳುವಳಿ ನಡೆಸಿದೆ. ●

ಅಂಗರ ದೇವಾಡಿಗರ ನಿಧನ

ಬೀರೆಬೈಲ್ ಗ್ರಾಮದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆಯ ಸದಸ್ಯರಾಗಿದ್ದ ಕಾಮ್ರೆಡ್ ಟಿ. ಅಂಗರ ದೇವಾಡಿಗರು ತಾ.7-6-87ರಂದು ತನ್ನ 68ನೇ ವಯಸ್ಸಿನಲ್ಲಿ ಮನೆಯಲ್ಲಿ ನಿಧನರಾದರು. ಟಿ. ಅಂಗರ ದೇವಾಡಿಗರು ಹಲವು ವರ್ಷಗಳಿಂದ ಟೈಲ್ ಕಾರ್ಮಿಕನಾಗಿ ದುಡಿದು ಟೈಲ್ ಕಾರ್ಮಿಕರ ಮತ್ತು ರೈತರ ಸಮಸ್ಯೆ ಹಾಗೂ ಬೀಡಿ ಕಾರ್ಮಿಕರ ಸಮಸ್ಯೆಯ ಬಗ್ಗೆ ಎಲ್ಲಾ ಹೋರಾಟದಲ್ಲಿ ಭಾಗವಹಿಸಿದವರಾಗಿದ್ದರು. ಇವರ ಮರಣದ ಬಗ್ಗೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಸಭೆ ಸೇರಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ವಿದ್ಯಾರ್ಥಿಗಳ ಭೀಕರ ಸೆಣಸಾಟ

(2ನೇ ಪುಟದಿಂದ)

ಣಿಗೆಗೆ ಎರಡು ದಿನಗಳ ಮೊದಲು, ಚಿರಾಕ್ ಶರಣಾಗತನಾಗಿ 'ಶಿಕ್ಷಣ ಸುಧಾರಣೆ' ಮಸೂದೆಯನ್ನು ಹಿಂತೆಗೆದುಕೊಂಡಿರುವುದಾಗಿ ಘೋಷಿಸಿದರು. ವಿಶ್ವವಿದ್ಯಾಲಯಗಳಲ್ಲಿ ಯಾವುದೇ ಬದಲಾವಣೆಯನ್ನು, ಅದು ಎಷ್ಟೇ ಅವಶ್ಯಕವಾಗಿದ್ದರೂ, ಸಂಬಂಧಿಸಿದ ವಿಭಾಗಗಳ ಆದರಲ್ಲೂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಗಣನೀಯ ಬೆಂಬಲವಿಲ್ಲದೆ ಯಶಸ್ವಿಯಾಗಿ ತರಲಾಗುವುದಿಲ್ಲವೆಂದು ಒಪ್ಪಿಕೊಂಡರು.

ವಿದ್ಯಾರ್ಥಿಗಳ ವಿಜಯವು ಬಲಪಂಥೀಯ ಸರ್ಕಾರದ ಪ್ರಥಮ ಪ್ರಮುಖ ಅಪಜಯವಾಗಿದೆ. ಮಸೂದೆಯ ಕರಡನ್ನು ಸಿದ್ಧ ಪಡಿಸಿದ ಕಿರಿಯ ಸಚಿವರು ರಾಜೀನಾಮೆನೀಡಬೇಕಾಯಿತು. ಡಿಸೆಂಬರ್ 10ರಂದು ವಿದ್ಯಾರ್ಥಿಗಳು ಅಗಲಿದ ತಮ್ಮ ಸಂಗಾತಿ ಮಲಿಕ್ ಬಸ್ಸೆಕಿನ್‌ರವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಸಂಪೂರ್ಣ ಮೌನ ಮೆರವಣಿಗೆಯೊಂದನ್ನು ಪ್ಯಾರಿಸ್ ನಗರದ ಬೀದಿಗಳಲ್ಲಿ ಕೊಂಡೊಯ್ದರು. NEVER AGAIN ಎಂಬ ಬ್ಯಾನರ್‌ಗಳನ್ನು ಅವರು ಹಿಡಿದಿದ್ದರು. ಹೆಚ್ಚುತ್ತಿದ್ದ ಜನಾಂಗೀಯ ದಬ್ಬಾಳಿಕೆಯನ್ನು ವಿರೋಧಿಸಿ ಇನ್ನೂ ಅನೇಕರು ವಿದ್ಯಾರ್ಥಿಗಳೊಂದಿಗೆ ಸೇರಿದರು. ಈ ಮೆರವಣಿಗೆಯು ಜನಾಂಗೀಯ ವಿಭಜನೆಯನ್ನು ಎದುರಿಸಲು ಮತ್ತು ವಲಸೆಗಾರರ ಮೇಲೆ ಅತಿಕ್ರಮಣ ನಡೆಸದಂತೆ "ಭದ್ರತೆ ಮತ್ತು ವ್ಯವಸ್ಥೆ"ಗೆ ಬೆದರಿಕೆಯೆಂದು ಪರಿಗಣಿಸಿ ವಿದ್ಯಾರ್ಥಿಗಳ ಮೇಲೆ ಧಾಳಿ ನಡೆಸಿದ ಫ್ಯಾಸಿಸ್ಟ್ ಗುಂಪುಗಳನ್ನು ಮೂಲೆಗುಂಪು ಮಾಡುವ ದೃಢ ಪ್ರತಿಜ್ಞೆಯ ಸಂಕೇತವಾಯಿತು.

1986 ಡಿಸೆಂಬರ್ ಘಟನೆಗಳು ಫ್ರಾನ್ಸ್ ಮತ್ತು ಯೂರೋಪಿನಾದ್ಯಂತ ಆಶಾಕಿರಣ ಮೂಡಲು ಪ್ರಮುಖ ಕಾರಣವಾಗಿದೆ.

ಇಂದು ಸ್ಪೈನ್‌ನಲ್ಲಿ ಸಹ ವಿಶ್ವವಿದ್ಯಾಲಯಗಳಲ್ಲಿ ಎಲ್ಲರಿಗೂ ಮುಕ್ತ ಪ್ರವೇಶಕ್ಕೆ ಒತ್ತಾಯಿಸಿ ವಿದ್ಯಾರ್ಥಿಗಳು ಬೀದಿಗಿಳಿದಿದ್ದಾರೆ. ಮ್ಯಾಡ್ರಿಡ್‌ನಲ್ಲಿ ಸಾವಿರಾರು ಜನರು ಮೆರವಣಿಗೆಯಲ್ಲಿ ಸಾಗಿದಂತೆ ಫ್ರೆಂಚ್ ಉದಾಹರಣೆಯು ಒಂದು ಅದಮ್ಯ ಸ್ಫೂರ್ತಿಯ ಚಿಲುಮೆಯಾಗಿದೆ.

ಕೃಪೆ : ಸ್ಟೂಡೆಂಟ್ ಸ್ಟ್ರಗಲ್.

ಅನುವಾದ :

ಎಸ್. ಆರ್. ಆರಾಧ್ಯ

ಬೆಲೆ ಏರಿಕೆ ವಿರುದ್ಧ ಧರಣಿ

ವಿದ್ಯುತ್, ಹಾಲು, ಸೌದೆ ಇತ್ಯಾದಿಗಳ ದರಗಳನ್ನು ಏರಿಸಿರುವುದರ ವಿರುದ್ಧ ಸಿ.ಪಿ.ಐ.(ಎಂ) ಕಾರ್ಯಕರ್ತರು ತಾಲ್ಲೂಕ್ ಕಛೇರಿಯ ಮುಂಭಾಗದಲ್ಲಿ ಜೂನ್ 25ರಂದು ಧರಣಿ ಸತ್ಯಾಗ್ರಹ ನಡೆಸಿದರು. ಕಾರ್ಯಕ್ರಮದ ನೇತೃತ್ವವನ್ನು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಎಸ್.ಬಿ. ಶಿವಶಂಕರ್, ಶಿವಮೊಗ್ಗ ಶಾಖೆ ಕಾರ್ಯದರ್ಶಿ ಕಾ॥ ಮಹ್ಮದ್ ಇಬ್ರಾಹಿಂ ಅಕ್ಕಿ ಗಿರಣಿ ಮತ್ತು ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಕಾ॥ ಜೆ. ತಿರುಕಪ್ಪ, ಬಿ.ಎಸ್. ದಾಸ್ ಮುಂತಾದವರು ವಹಿಸಿದ್ದರು.

ಹರ್ಯಾಣಾ ಚುನಾವಣೆ : ಕಾಂಗ್ರೆಸ್ (ಐ) ನ ಪರಾಭವ ಮಹತ್ವಪೂರ್ಣ

– ಹರ್‌ಕಿಷನ್‌ಸಿಂಗ್ ಸುರ್ಜಿತ್

ಪಶ್ಚಿಮ ಬಂಗಾಳದಲ್ಲಿ ಎಡರಂಗ ಹಾಗೂ ಕೇರಳದಲ್ಲಿ ಎಲ್.ಡಿ.ಎಫ್. ಕಾಂಗ್ರೆಸ್(ಐ)ನ್ನು ಪೂರ್ಣವಾಗಿ ಸೋಲಿಸಿದ ಮೂರು ತಿಂಗಳ ನಂತರ ಈಗ ಮತ್ತೆ ಹರ್ಯಾಣಾದ ಜನತೆ ಕಾಂಗ್ರೆಸ್(ಐ)ಗೆ ಅತ್ಯಂತ ಅವಮಾನ ಕಾರಕ ಸೋಲುಣ್ಣಿಸಿದ್ದಾರೆ. 1977ರ ಜನತಾ ಗೆಲುವಿನ ನಂತರ ಇಷ್ಟೊಂದು ಸಾರಾಸಗಟು ಪ್ರಮಾಣದಲ್ಲಿ ಕಾಂಗ್ರೆಸ್(ಐ) ಅಭ್ಯರ್ಥಿಗಳು,ಮಂತ್ರಿಗಳು ಮಣ್ಣು ಮುಕ್ಕಿರಲಿಲ್ಲ. ನಿಸ್ಸಂಶಯವಾಗಿಯೂ ಈ ಚುನಾವಣೆ ಕಾಂಗ್ರೆಸ್(ಐ)ನ್ನು ಅಲುಗಾಡಿಸಿದೆ. ದೇಶದ ರಾಜಕೀಯ ವಾತಾವರಣದಲ್ಲಿ ಹೊಸ ಚೈತನ್ಯ ತುಂಬಿದೆ–ವಿಶೇಷವಾಗಿ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನವಿಲ್ಲದ್ದರಿಂದ ಕಾಂಗ್ರೆಸ್(ಐ)ಪ್ರಬಲವಾಗಿದ್ದ ವಾಯುವ್ಯ ಪ್ರದೇಶದಲ್ಲಿ. ಜಾತಿ, ಕೋಮು, ಚರಣ್‌ಸಿಂಗ್ ಸಹಾನುಭೂತಿ ಇತ್ಯಾದಿ ಲೆಕ್ಕಾಚಾರಗಳನ್ನೆಲ್ಲಾ ಹುಸಿಗೊಳಿಸಿದ ಈ ಚುನಾವಣೆಯ ಪ್ರಮುಖ ಅಂಶಗಳೇನು ?

ಪಂಜಾಬ್ ಒಪ್ಪಂದ ಮತದಾರರ ತೀರ್ಪಿನ ಮೇಲೆ ಸ್ವಲ್ಪ ಪರಿಣಾಮ ಬೀರಿದರೂ ಅದು ಈ ಚುನಾವಣೆಯ ಪ್ರಮುಖ ಪ್ರಶ್ನೆಯಾಗಿರಲಿಲ್ಲ. ಚುನಾವಣಾ ಪ್ರಚಾರದ ಸಮಯದಲ್ಲಿ ಪಂಜಾಬಿನ ವಿರುದ್ಧವಾಗಲೀ, ವಿವಿಧ ಕೋಮುಗಳ ನಡುವೆಯಾಗಲೀ ವೈಷಮ್ಯಭಾವನೆ ಕಿಂಚಿತ್ತೂ ಕಾಣಬರಲಿಲ್ಲ ಎಂಬುದು ಗಮನಾರ್ಹ. 27 ಕ್ಷೇತ್ರಗಳಲ್ಲಿ ಪ್ರಭಾವಶಾಲಿಯಾಗಿದ್ದ ಸಿಖ್ಖ ಮತದಾರರು ಲೋಕದಳ(ಬಿ)ವನ್ನೇ ಬೆಂಬಲಿಸಿದರು. ಬರ್ನಾಲಾ ಸರ್ಕಾರದ ವಜಾ, ಇರಾಡಿ ಆಯೋಗದ ವರದಿ ಪ್ರಕಟಣೆ, ಚಂಡೀಗಢದ ಬಗ್ಗೆ ಪ್ರಧಾನಿ ಹೇಳಿಕೆ ಯಾವುದಕ್ಕೂ ಹರ್ಯಾಣಾದ ಜನತೆ ಮರುಳಾಗಲಿಲ್ಲ.

ಹರ್ಯಾಣಾ ಚುನಾವಣೆಯ ಫಲಿತಾಂಶ ನಿಸ್ಸಂಶಯವಾಗಿಯೂ ಹರ್ಯಾಣಾ ಜನತೆ ಕಾಂಗ್ರೆಸ್(ಐ) ದುರಾಡಳಿತದ ವಿರುದ್ಧ ನೀಡಿದ ಪ್ರಜಾಸತ್ತಾತ್ಮಕ ತೀರ್ಪು. ಕಾಂಗ್ರೆಸ್(ಐ) ಒಂದೆಡೆ ರೈತಾಪಿ ವರ್ಗಕ್ಕೆ ಲಾಭಕಾರೀ ನ್ಯಾಯ ಬೆಲೆಯನ್ನು ಕೊಡದೆ,ಇನ್ನೊಂದೆಡೆ ಸತತವಾಗಿ ತೆರಿಗೆಗಳನ್ನು ಹೊರಿಸಿತು. ಕೃಷಿ ಕೂಲಿಕಾರರು ಹಾಗೂ ಇತರ ಬಡ ಜನರು ಬಡತನ, ನಿರುದ್ಯೋಗ ನಿವಾರಣೆಯ ಸುಳ್ಳು ಆಶ್ವಾಸನೆಗಳನಷ್ಟೇ ಕಾಣಬೇಕಾಯಿತು. ಜತೆಗೆ ಎಲ್ಲೆಲ್ಲೂ ಭ್ರಷ್ಟಾಚಾರ ಹಾಗೂ ಅಧಿಕಾರಶಾಹೀ ವರ್ತನೆ, ಗ್ರಾಮೀಣ ಜನತೆಯಲ್ಲಿ ವ್ಯಾಪಕ ಅಸಂತೃಪ್ತಿ ಹರಡಿದ ಮೂಲಭೂತ ಅಂಶಗಳಿವು. ಇವು ಹರ್ಯಾಣಾಕ್ಕೆ ಮಾತ್ರವೇ ಸೀಮಿತವಾಗಿಲ್ಲ. ಸಂದರ್ಭ ಒದಗಿದಾಗ ಬೇರೆ ರಾಜ್ಯಗಳಲ್ಲೂ ಇದೇ ಪ್ರತಿಕ್ರಿಯೆ ಕಾಣಲು ಸಾಧ್ಯ ಎಂಬುದನ್ನು ಇದು ತೋರಿಸುತ್ತದೆ. ಈ ವ್ಯಾಪಕ ಆರ್ಥಿಕ ಅಸಂತೃಪ್ತಿಯ ಹಿನ್ನೆಲೆಯಲ್ಲಿ ದೇವಿಲಾಲರ ಸಾಲ ಮನ್ನಾ ಮಾಡುವ, ಪಿಂಚಣಿ ನೀಡುವ ಆಶ್ವಾಸನೆ ಜನರಲ್ಲಿ ಹುರುಪನ್ನು ತುಂಬಿತು.

ಪ್ರಜಾಪ್ರಭುತ್ವ ಆಚರಣೆಯ ಬಗ್ಗೆಯೂ ಕಾಂಗ್ರೆಸ್(ಐ)ನ ವರ್ತನೆಗಳಿಂದ ಜನತೆ ರೋಸಿಹೋಗಿದ್ದರು. 1979ರಲ್ಲಿ ಪಕ್ಷಾಂತರಗಳನ್ನು ನಡೆಸಿ ರಾಜ್ಯದ ಜನತಾ ಸರ್ಕಾರವನ್ನು ಭಜನ್‌ಲಾಲ್ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನಾಗಿ ಮಾರ್ಪಡಿಸಲಾಯಿತು. 1982ರಲ್ಲಿ ಲೋಕದಳ ಹೆಚ್ಚು ಸ್ಥಾನ ಪಡೆದರೂ ಭಜನ್‌ಲಾಲರ ಅಲ್ಪಮತ ಸರ್ಕಾರ ಪ್ರತಿಷ್ಠಾಪಿಸಿ. ನಂತರ ಪಕ್ಷಾಂತರಗಳನ್ನು ನಡೆಸಿ ಮತದಾರರಿಗೆ ಮೋಸ ಮಾಡಲಾಯಿತು. ಈ ಮಂತ್ರಿಮಂಡಳದ ವಿರುದ್ಧ ವ್ಯಾಪಕ ಆಂದೋಲನ ಹರಡಿದಾಗ ಅದನ್ನು ನಿರ್ಲಕ್ಷಿಸಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕುಖ್ಯಾತ ಬನ್ಸಿಲಾಲರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಯಿತು.

ಹರ್ಯಾಣಾದಲ್ಲಿ ಕಾಂಗ್ರೆಸ್(ಐ)ನ ಸೋಲಿಗೆ ಇವೆಲ್ಲಾ ಒಟ್ಟಾಗಿ ಕಾರಣವಾಗಿದೆ. ದೇವೀಲಾಲ್ ಹಾಗೂ ಲೋಕದಳದ ಈ ಗೆಲುವು ಎಡರಂಗ ಹಾಗೂ ಎಲ್.ಡಿ.ಎಫ್. ವಿಜಯಗಳಿಗಿಂತ ಭಿನ್ನ ಸ್ವರೂಪದ್ದು. ಈ ಎರಡು ವಿಜಯಗಳು ವರ್ಗಶಕ್ತಿಗಳ ಸಮತೋಲನವನ್ನು ದುಡಿಯುವ ವರ್ಗದ ಪರವಾಗಿ ಬದಲಿಸುವ ಪರ್ಯಾಯ ಧೋರಣೆಗಳ ಆಧಾರದ ಮೇಲೆ ಪ್ರಾಪ್ತವಾಗಿವೆ, ಮತ್ತು ದೇಶದ ಮುಂದೆ ಎಡ ಮತ್ತು ಪ್ರಜಾಪ್ರಭುತ್ವ ಪರ್ಯಾಯವನ್ನು ಇಟ್ಟಿವೆ. ಹರ್ಯಾಣಾದಲ್ಲಿ ಗೆಲುವಿನ ಸ್ವರೂಪ ಇದಕ್ಕೆ ಭಿನ್ನವಾಗಿದ್ದರೂ ಕೂಡ ಅದನ್ನು ಉತ್ತರದ ರಾಜ್ಯಗಳಲ್ಲಿ ಕಾಂಗ್ರೆಸ್(ಐ)ನ ಗುತ್ತೇದಾರಿಕೆಯನ್ನು ಮುರಿಯುವ ಆಂದೋಲನವಾಗಿ ಪರಿವರ್ತಿಸಲು ಸಾಧ್ಯ.

ಈಗ ದೇವಿಲಾಲ್ ಹಾಗೂ ಅವರ ಪಕ್ಷದ ಮೇಲೆ ಜನತೆಯ ಹಿತಾಸಕ್ತಿಗಳಿಗಾಗಿ ದುಡಿದು ತಮ್ಮ ಈ ಗೆಲುವನ್ನು ಕ್ರೋಡೀಕರಿಸಿಕೊಳ್ಳುವ ಜವಾಬ್ದಾರಿಯಿದೆ. ಈ ಪಕ್ಷ ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಬಿಹಾರದಲ್ಲೂ ಪ್ರಭಾವ ಶಾಲಿಯಾಗಿರುವುದರಿಂದ ಹರ್ಯಾಣಾದಲ್ಲಿ ಅವರ ಕೆಲಸದ ರೀತಿ ಈ ರಾಜ್ಯಗಳಲ್ಲೂ ಅವರ ಪ್ರಭಾವ ಹೆಚ್ಚಿಸಿಕೊಳ್ಳಲು ಸಹಾಯಕವಾಗುತ್ತದೆ. ಅದು ತಾನೇ 2/3ರಷ್ಟು ಬಹುಮತ ಪಡೆದಿದ್ದರೂ ಬಿ.ಜೆ.ಪಿ.ಯನ್ನು ಸರ್ಕಾರದಲ್ಲಿ ಸೇರಿಸಿಕೊಂಡಿರುವುದು ಪ್ರಜಾಪ್ರಭುತ್ವವಾದಿಗಳಲ್ಲಿ ಸಂಶಯ ಮೂಡಿಸಿದೆ. ಹರ್ಯಾಣಾದಲ್ಲಿ ಬಿ.ಜೆ.ಪಿ.ಯನ್ನು ದೂರಸರಿಸದೆ,ಅದರ ಧೋರಣೆಗಳ ವಿರುದ್ಧ ಹೋರಾಡದೆ ಪ್ರಜಾಪ್ರಭುತ್ವ ಆಂದೋಲನದ ಮುನ್ನಡೆ ಸಾಧ್ಯವಿಲ್ಲ. ಲೋಕದಳ(ಬಿ)ದ ಮುಖಂಡರು ಈ ಬಗ್ಗೆ ಯೋಚಿಸಿ ರಾಜ್ಯದ ಜನತೆಯ ತುರ್ತಿನ ಸಮಸ್ಯೆಗಳನ್ನು ಪರಿಹರಿಸಲು ಪಂಜಾಬಿನೊಡನೆ ಇರುವ ಪ್ರಶ್ನೆಗಳನ್ನು ಬಗೆಹರಿಸಲು ತಮ್ಮ ಪೂರ್ಣ ಶಕ್ತಿಯನ್ನು ವಿನಿಯೋಗಿಸಬೇಕು. ಕೇಂದ್ರ ಸರ್ಕಾರದ ಪಗಡೆಯಾಟದಲ್ಲಿ ಹರ್ಯಾಣಾ ಒಂದು ದಾಳವಾಗದಂತೆ ಎಚ್ಚರಿಕೆ ವಹಿಸಬೇಕು.

ದೇವೀಲಾಲರ ಸರ್ಕಾರ ಹಿಂದಿನ ಜನತಾ ಸರ್ಕಾರದ ಕಾರ್ಯ ನಿರ್ವಹಣೆಯಿಂದ ಪಾಠ ಕಲಿಯಬೇಕು. ಜನತೆಯ ಬೆಂಬಲ ಹೇಗಿದ್ದರೂ ದಕ್ಕುತ್ತದೆ ಎಂಬಭಾವನೆ ಬರಬಾರದು. ಕಾಂಗ್ರೆಸ್(ಐ) ಧೋರಣೆಗಳ ವಿರುದ್ಧ ಜನತೆಯಲ್ಲಿ ಆಳವಾದ ಅಸಂತೃಪ್ತಿಯಿದೆ. ಅದನ್ನು ಪ್ರಜಾಪ್ರಭುತ್ವ ಆಂದೋಲನದತ್ತ ಕ್ರೋಡೀಕರಿಸಬೇಕು.

ಬ್ರಿಟನ್‌ನಲ್ಲಿ ಥ್ಯಾಚರ್ ಗೆಲುವು

ಕೆಲವು ಸಂಗತಿಗಳು

ಯುರೋಪಿನ ಪ್ರತಿಗಾಮೀ ರಾಜಕಾರಣಿಗಳನ್ನು ಮತ್ತು ಅಧ್ಯಕ್ಷ ರೇಗನ್‌ರನ್ನು ಸಂತುಷ್ಟಗೊಳಿಸಿದ ಬ್ರಿಟಿಷ್ ಸಾರ್ವತ್ರಿಕ ಚುನಾವಣೆ ದೇಶವನ್ನು ವಿಭಜಿಸಿದೆ ಎಂದು ಸ್ವತಃ ಥ್ಯಾಚರ್ ಅವರೇ ಒಪ್ಪಿಕೊಂಡಿದ್ದಾರೆ. ಥ್ಯಾಚರ್‌ರ ಗೆಲುವು ನಿರೀಕ್ಷೆಗಿಂತ ದೊಡ್ಡ ಪ್ರಮಾಣದಲ್ಲಿ ಇದ್ದರೂ, ಆಕೆಯ ಪಕ್ಷದ ಸದಸ್ಯರ ಸಂಖ್ಯೆ 392ರಿಂದ ಈಗ 375ಕ್ಕಿಳಿದಿದೆ. ಲೇಬರ್ ಪಕ್ಷದ ಸಂಸತ್ ಸದಸ್ಯರ ಸಂಖ್ಯೆ 208ರಿಂದ 229ಕ್ಕೇರಿದೆ. ಶೇಕಡಾವಾರನ್ನು ತಗೊಂಡಾಗ, ಕನ್ಸರ್ವೇಟಿವ್ ಪಕ್ಷದ ಪಾಲು 42.42 ಶೇಕಡಾದಿಂದ 42.3 ಶೇಕಡಕ್ಕಿಳಿದರೆ, ಲೇಬರ್ ಪಕ್ಷ ಅದನ್ನು 27.51ರಿಂದ 30.83 ಶೇಕಡಕ್ಕೆ ಹೆಚ್ಚಿಸಿಕೊಂಡಿದೆ.

ಇದಕ್ಕಿಂತ ಮುಖ್ಯವಾಗಿ ದೇಶದ ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲೆಲ್ಲಾ ಥ್ಯಾಚರ್‌ಪಕ್ಷ ಪೂರ್ಣ ಸೋಲನ್ನನುಭವಿಸಿದೆ. 30ಲಕ್ಷ ಬ್ರಿಟಿಷ್ (ದೇಶದ ದುಡಿಯುವ ಜನಸಂಖ್ಯೆಯ 11%) ನಿರುದ್ಯೋಗಿಗಳು ಥ್ಯಾಚರ್ ಸರ್ಕಾರದ ಬಗ್ಗೆ ತಮ್ಮ ಸ್ಪಷ್ಟ ತೀರ್ಪು ನೀಡಿದ್ದಾರೆ. ಶ್ರೀಮಂತ ಭೂಮಾಲೀಕರು ಹಾಗೂ ಮಧ್ಯಮವರ್ಗದ ಬಿಳಿ ಕಾಲರ್ ವಿಭಾಗಗಳ ಪ್ರಾಬಲ್ಯವಿದ್ದಲ್ಲಿ ಮಾತ್ರ ಕನ್ಸರ್ವೇಟಿವ್ ಪಕ್ಷ ಮುನ್ನಡೆ ಗಳಿಸಿದೆ. ಆದ್ದರಿಂದಲೇ ಈ ಚುನಾವಣೆ ದೇಶವನ್ನು ವಿಭಜಿಸಿದೆ ಎಂಬ ಲೇಬರ್ ಮುಖಂಡ ಕಿನ್ನೊಕ್‌ರ ಪ್ರತಿಕ್ರಿಯೆಯನ್ನು ಥ್ಯಾಚರ್ ಕೂಡ ಒಪ್ಪಬೇಕಾಗಿ ಬಂತು. ಈ ವಿಭಜನೆ ಥ್ಯಾಚರ್‌ರವರ ಮೂರನೇ ಅಧಿಕಾರಾವಧಿಯಲ್ಲಿ ಇನ್ನಷ್ಟು ಹದಗೆಡಲಿದೆ ಎಂಬುದು ಖಂಡಿತ.

ದೊಡ್ಡಬಂಡವಾಳಿಗರ ನೇರ ಬೆಂಬಲ ಪಡೆದ ಕನ್ಸರ್ವೇಟಿವ್ ಪಕ್ಷ ಈ ಚುನಾವಣೆಗೆ ಮಾಡಿದ ಖರ್ಚು 1ಕೋಟಿ60 ಲಕ್ಷ ಪೌಂಡುಗಳು (ಸುಮಾರು 34 ಕೋಟಿ ರೂ.ಗಳು) ಲೇಬರ್ ಪಕ್ಷ ಇದರ ಕಾಲಂಶದಷ್ಟು ಅಂದರೆ 40ಲಕ್ಷ ಪೌಂಡುಗಳನಷ್ಟೇ ಖರ್ಚು ಮಾಡಿದರೂ ಸಾಲಗಾರನಾಗಬೇಕಾಯಿತು. ಜನತೆಯ ಸಮೂಹ ಮಾಧ್ಯಮಗಳಾದ ಬಿ.ಬಿ.ಸಿ. ರೇಡಿಯೋ, ಟೆಲಿವಿಷನ್‌ಗಳನ್ನು ಅತೀ ಬುದ್ಧಿವಂತಿಕೆಯಿಂದ ಆಳುವ ಪಕ್ಷದ ಪರವಾಗಿ ಬಳಸಿಕೊಳ್ಳಲಾಯಿತು. "ಪ್ರಜಾಪ್ರಭುತ್ವಗಳ ತಾಯಿನಾಡು" ಇದು.

ನಿಶ್ಯಸ್ತ್ರೀಕರಣ ಈ ಚುನಾವಣೆಯ ಪ್ರಮುಖ ಪ್ರಶ್ನೆಯಾಗಿತ್ತು. ಲೇಬರ್ ಪಕ್ಷ ಸಂಪೂರ್ಣ ಪರಮಾಣು ನಿಶ್ಯಸ್ತ್ರೀಕರಣಕ್ಕೆ ತಾನು ಬದ್ಧ ಎಂದು ರಭಸದಿಂದ ಪ್ರಚಾರ ನಡೆಸಿತು. ಕನ್ಸರ್ವೇಟಿವ್ ಪಕ್ಷದ್ದು ತದ್ವಿರುದ್ಧ ನಿಲುವು. ಈ ಪ್ರಶ್ನೆ ಎಷ್ಟೊಂದು ತೀಕ್ಷ್ಣಗೊಂಡಿತೆಂದರೆ ಕಳೆದ ಚುನಾವಣೆಗಳಲ್ಲಿ 25% ಮತಗಳಿಸಿದ್ದ ಮೂರನೇ ರಾಜಕೀಯ ಗುಂಪಿನ ಅಂದರೆ ಲಿಬರಲ್ ಹಾಗೂ ಸೋಷಲ್ ಡೆಮಾಕ್ರಟಿಕ್ ಪಕ್ಷಗಳ ಕೂಟದ ಬೆಂಬಲಿಗರಲ್ಲಿ ಹಲವರು ಥ್ಯಾಚರ್ ಪರವಾಗಿ ಮಾತನಾಡಿರಬಹುದೆಂದು ಕೆಲವು ವಿಶ್ಲೇಷಕರು ಭಾವಿಸುತ್ತಾರೆ. ಯಾಕೆಂದರೆ ಈ ಕೂಟ ಕೂಡ ಪರಮಾಣು ಶಸ್ತ್ರಾಸ್ತ್ರಗಳ ಪರವಾಗಿರುವ ಕೂಟ. ○

ಮರುಭೂಮಿಯಲ್ಲಿ ಅರಳುತ್ತಿರುವ ಕ್ರಾಂತಿ

‘ಸಹರಾ, ಎಂಬುದೊಂದು ಮರುಭೂಮಿ ಎಂಬ ಪದವನ್ನು ನಮ್ಮ ಓದುಗರು ತಮ್ಮ ಮಾಧ್ಯಮಿಕ ಪ್ರೌಢಶಾಲೆಗಳ ತರಗತಿಗಳಲ್ಲಿ ಕೇಳಿರಬಹುದು. ಈ ಮರುಭೂಮಿಯಲ್ಲೂ ಹೋರಾಟದ ಕೆಂಪು ಕುಸುಮಗಳು ಆ ವಿಶಾಲ ಮರುಭೂಮಿಯ ಉದ್ದಗಲಕ್ಕೂ ಅರಳಿವೆ! 1973 ರ ಮೇ 10 ರಂದು ರೂಪುಗೊಂಡ ಪೋಲಿಸಾರಿಯೊರಂಗ ಹುಟ್ಟಿದ 10 ದಿನಗಳಲ್ಲಿಯೇ ಆಫ್ರಿಕಾದ ವಾಯುವ್ಯ ಭಾಗವನ್ನು ಆಕ್ರಮಿಸಿದ್ದ ಸ್ಪೇನ್ ದೇಶದ ವಸಾಹತಶಾಹಿಗಳ ವಿರುದ್ಧ ಸಶಸ್ತ್ರ ಯುದ್ಧವನ್ನು ಆರಂಭಿಸಿದರು.

ಈ ಮರುಭೂಮಿಯಲ್ಲಿ ಯಥೇಚ್ಛವಾಗಿರುವ ಖನಿಜಸಂಪತ್ತು, ಬಾಂಬ್‌ಗಳನ್ನು ತಯಾರಿಸಲು ಅತ್ಯಗತ್ಯವಾದ ಯುರೇನಿಯಂನ ಮೇಲೆ ಪ್ರಿಯ ಅಮೇರಿಕಾಕ್ಕೆ ಕಣ್ಣು. ಅದು ಒಂದು ಪ್ರಗತಿ ಪರ ಕೂಟವಾದ ಪೋಲಿಸಾರಿಯೋ ರಂಗದ ನೇತೃತ್ವ ಸ್ವತಂತ್ರ ದೇಶದ ಅಧೀನವಾದರೆ? ಅಮೇರಿಕಾಕ್ಕೆ ಖೋತಾ ಆಗುತ್ತದೆಂಬುದಕ್ಕಾಗಿ ಆ ಮರಳುಗಾಡಿನಲ್ಲಿಯೂ ಜನರು ಸ್ವಾತಂತ್ರ್ಯಕ್ಕಾಗಿ ಸೆಣಸುವಂತೆ ಮಾಡುತ್ತಿದೆ.

1966ರಲ್ಲಿ ವಿಶ್ವಸಂಸ್ಥೆ ಆ ಪ್ರದೇಶದಲ್ಲಿ ವಾಸಿಸುವ ಜನರ ಅಭಿಮತವನ್ನು ಪಡೆದು (ರೆಫರೆಂಡಂಮಾಡಿ) ಅವರ ಭವಿಷ್ಯವನ್ನು ಅವರೇ ನಿರ್ಧರಿಸಿಕೊಳ್ಳಲು ಅವಕಾಶ ನೀಡಬೇಕೆಂದು ನಿರ್ಣಯ ಮಾಡಿದ್ದರೂ ಅಮೇರಿಕಾದ ಕುಮ್ಮಕ್ಕು ಕುಪ್ರಸಿದ್ಧ ಇಸ್ರೇಲ್ ದ. ಆಫ್ರಿಕಾಗಳಬೆಂಬಲದಿಂದ ಮೊರಾಕ್ಕೊ ದೇಶ ಸಹರಾವಿ ಗಣರಾಜ್ಯವನ್ನು ಆಕ್ರಮಿಸಿ ಯುದ್ಧ ಹೂಡುತ್ತಿದೆ.

ಸಹರಾವಿ ಜನತೆಯ ಸಂಪೂರ್ಣ ಬೆಂಬಲದಿಂದ 1976ರ ಅಕ್ಟೋಬರ್ 26ರಂದು ಸ್ಪೇನ್‌ನ ಆಡಳಿತಗಾರರನ್ನು ಓಡಿಸಿ ಗಣರಾಜ್ಯವನ್ನು ಘೋಷಿಸಿತು, ಪೋಲಿಸರಿಯೋ ರಂಗ. ಅಂದಿನಿಂದ ಇಂದಿನವರೆಗೂ ದೇಶವನ್ನು ಆಕ್ರಮಿಸಿದ ಮೊರೆಕ್ಕೊದ ಸೈನ್ಯದೊಡನೆ ಎಡಬಿಡದೆ ಸಶಸ್ತ್ರ ಹೋರಾಟ ನಡೆಸಿದ್ದಾರೆ.

ಈಗಾಗಲೇ ಸಹರಾವಿ ಗಣರಾಜ್ಯದ ಪೋಲಿಸಾರಿಯೋ ಸರ್ಕಾರವನ್ನು ಜಗತ್ತಿನ 69ದೇಶಗಳು ಮಾನ್ಯತೆ ನೀಡಿವೆ. ಆಫ್ರಿಕಾದ ರಾಷ್ಟ್ರಗಳಲ್ಲೂ ಸೇರಿರುವ ‘ಆಫ್ರಿಕನ್ ಐಕ್ಯತಾ ಸಂಘಟನೆ’ ಮೊರೆಕ್ಕೊ ವಿರೋಧಿಸಿ ಈ ಸಂಘದ ಸದಸ್ಯತ್ವವನ್ನು ಬಿಟ್ಟರೂ ಹಿಂಜರಿಯದೆ ಈ ಹೊಸಗಣರಾಜ್ಯಕ್ಕೆ ಸದಸ್ಯತ್ವ ನೀಡಿದೆ.

ಪೋಲಿಸಾರಿಯೋ ರಂಗದ 14 ನೇ ವಾರ್ಷಿಕದಿನದಂದು ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ತನ್ನ ಕ್ರಾಂತಿಕಾರಿ ಶುಭಾಶಯಗಳನ್ನು ಅರ್ಪಿಸುತ್ತಾ ವಿಶ್ವದ ಪ್ರತಿಗಾಮಿ ಶಕ್ತಿಗಳ ಬೆಂಬಲದ ಮೊರೆಕ್ಕೊ ಆಕ್ರಮಣಕಾರಿಯೊಡನೆ ಸೆಣಸುತ್ತಲೇ ತನ್ನ ಜನಕ್ಕೆ ಶಿಕ್ಷಣ, ಆರೋಗ್ಯ ಉತ್ತಮ ಜೀವನವನ್ನು ಒದಗಿಸಲು ಶ್ರಮಿಸುತ್ತಿದೆ ಎಂದಿದೆ.

‘‘ನಿಮ್ಮ ಮೂರು ಕೋಟಿ ಬೆಳ್ಳಿ ಚೂರುಗಳನ್ನು ನೀವೆ? ಇಟ್ಟುಕೊಳ್ಳಿ." ನಮಗೆ ಮಾನವೀಯತೆ ವ್ಯಕ್ತಿತ್ವ ಮುಖ್ಯ. ನಮಗೆ ಕಪ್ಪು ಎಂಬುದು ಅಮೇರಿಕಾದ ಡಾಲರ್‌ಗಿಂತ ಬಹಳ ಸುಂದರ,

"ನಿಮ್ಮ ಬೆಳ್ಳಿ ಚೂರುಗಳನ್ನು ನೀವೇ ಇಟ್ಟುಕೊಳ್ಳಿ"

ಹೀಗೆಂದು ಅಮೇರಿಕಾದ ರೇಗನರ ಮುಖಭಂಗ ಮಾಡಿದವರು ಅಲಿಪ್ತ ರಾಷ್ಟ್ರಗಳ ಒಕ್ಕೂಟದ ಅಧ್ಯಕ್ಷ ಹಾಗೂ ಸಮಾಜವಾದಿ ಜಿಂಬಾಬ್ವೆಯ ಅಧ್ಯಕ್ಷ ಡಾ॥ರಾಬರ್ಟ್ ಮುಗಾಬೆ. "ಆಫ್ರಿಕಾ ದಿನಾಚರಣೆ" ಗಾಗಿ ಅವರು ಮಾಡುತ್ತಿದ್ದ ಟಿ.ವಿ ಭಾಷಣದಲ್ಲಿ ಮೊಳಗಿದ ಗಂಡು ಧ್ವನಿ ಅದು.

ದ.ಆಫ್ರಿಕಾದ ರಕ್ಕಸರ ಜೊತೆಗಾರ ಅಮೇರಿಕಾ "ಗಡಿನೇಶ" ಗಳೆಂದು ಜೆಪ

[8ನೇ ಪುಟ ನೋಡಿ]

REG No. BGW-148 MAG (2) PRB DECR 319/78-79

ಜುಲೈ 21 ಸಾರ್ವಜನಿಕ ಉದ್ದಿಮೆಗಳ ಮುಷ್ಕರ

(1ನೇ ಪುಟದಿಂದ)

ಮಧ್ಯಂತರ ಪರಿಹಾರ ಬೇಕೆಂಬ ಬೇಡಿಕೆಯನ್ನು ಎಬ್ಬಿಸಿದೆ.

ಈ ಪರಿಸ್ಥಿತಿ ಕಾರ್ಮಿಕರಲ್ಲಿ ಅಗಾಧ ಅಸಂತೃಪ್ತಿಯನ್ನು ಮೂಡಿಸಿದೆ. ಬಂಡವಾಳಶಾಹಿ ವರ್ಗದ ಈ ಧಾಳಿಯನ್ನೆದುರಿಸಲು ಕಾರ್ಮಿಕ ವರ್ಗದಿಂದ ಮೂಡುತ್ತಿರುವ ಒತ್ತಡದ ಹಿನ್ನೆಲೆಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳೆಲ್ಲಾ ಒಂದಾಗಿ ಐಕ್ಯ ಹೋರಾಟ ನಡೆಸಲು ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಸಮಿತಿಯನ್ನು ರೂಪಿಸಿಕೊಂಡಿದ್ದಾರೆ. ಈ ಸಮಿತಿಯು ಜುಲೈ 21 ರಂದು ಅಖಿಲ ಭಾರತ ಮುಷ್ಕರ ನಡೆಸಲು ಕರೆ ಕೊಟ್ಟಿದೆ.

ಸಾರ್ವಜನಿಕ ಕ್ಷೇತ್ರದ ಈ ಕಾರ್ಮಿಕರ ಹೋರಾಟ ಕೇವಲ ಅವರ ಹೋರಾಟವಲ್ಲ. ಸಂಘಟಿತ ಕಾರ್ಮಿಕ ರಂಗದಲ್ಲಿ ಮುಂಚೂಣಿಯಲ್ಲಿರುವ ಇವರ ಹೋರಾಟ ಇಡೀ ದೇಶದ ಎಲ್ಲಾ ಕಾರ್ಮಿಕರ ವೇತನದ ಮೇಲೆ ಪರಿಣಾಮ ಬೀರುತ್ತದೆ. ದೇಶವನ್ನು ಅಧೋಗತಿಗೊಯ್ಯುತ್ತಿರುವ ಕೇಂದ್ರಸರ್ಕಾರದ ದುರ್ನೀತಿಯ ವಿರುದ್ಧ ಹೋರಾಟವಾಗುವುದರಿಂದ ದೇಶದ ಎಲ್ಲಾ ಜನತೆಯ ಮೇಲೂ ಪರಿಣಾಮ ಬೀರುತ್ತದೆ. ಆದುದರಿಂದ ಈ ಕಾರ್ಮಿಕರ ಹೋರಾಟಕ್ಕೆ ಎಲ್ಲ ಜನತೆಯ ಬೆಂಬಲ ಆಗತ್ಯ.

ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಕೂಡ ಸತ್ವಯುತವಾದ ಧ್ವನಿ ಮೊಳಗಿಸಲು ಮುಷ್ಕರದ ಸಿದ್ಧತೆಗಳನ್ನು ದ್ವಿಗುಣಗೊಳಿಸಬೇಕೆಂದು ಕಾ|| ಪಂಥೆ ಕರೆ ನೀಡಿದರು. ○

ಚೈತನ್ಯಶಾಲಿ ರಾಷ್ಟ್ರಪತಿ ಬೇಕು

[1ನೇ ಪುಟದಿಂದ]

ನ ಪರವಾಗಿ ಕೇಂದ್ರ ಸಮಿತಿ ಸದಸ್ಯ ಹಾಗೂ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್, ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್. ಸೂರ್ಯನಾರಾಯಣ ರಾವ್ ಇವರುಗಳು ಸಿ.ಪಿ.ಐ. ಪರವಾಗಿ ರಾಜ್ಯ ಕಾರ್ಯದರ್ಶಿ ಎಂ.ಎಸ್. ಕೃಷ್ಣನ್ ಹೂಮಾಲೆ ಹಾಕಿ ಸ್ವಾಗತಿಸಿದರು. ಜನತಾ ಸರ್ಕಾರದ ಮಂತ್ರಿಗಳಾದ ಎಚ್.ಡಿ. ದೇವೇಗೌಡ, ಎಸ್. ಆರ್. ಬೊಮ್ಮಾಯಿ ಮೊದಲಾದ ಪ್ರಮುಖ ಸಚಿವರುಗಳೂ ಹಾಜರಿದ್ದು ಸ್ವಾಗತಿಸಿದರು. ಶ್ರೀ ಕೃಷ್ಣ ಐಯ್ಯರ್‌ರವರು ಕೇರಳ, ಮಹಾರಾಷ್ಟ್ರ, ಹರ್ಯಾಣಾ ಮೊದಲಾದ ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಏರ್ಪಡಿಸಿದ ಚುನಾವಣಾ ಸಭೆಗಳನ್ನುದ್ದೇಶಿಸಿ ಮಾತನಾಡುತ್ತಾ ಬೆಂಗಳೂರಿಗೆ ಆಗಮಿಸಿದ್ದಾರೆ. ಬೆಂಗಳೂರಿನಲ್ಲಿ ಪತ್ರಿಕಾ ಗೋಷ್ಠಿಯನ್ನು ಹಾಗೂ ವಕೀಲರ ಸಂಘದಲ್ಲಿ ಕಿಕ್ಕಿರಿದು ನೆರೆದ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಶುಕ್ರವಾರ ವಿರೋಧ ಪಕ್ಷಗಳ ಶಾಸಕರು ಹಾಗೂ ಲೋಕ ಸಭಾ ಸದಸ್ಯರನ್ನುದ್ದೇಶಿಸಿ ಮಾತನಾಡಿದರು. ●

ರಕ್ಷಣೆಗೆ ಬದ್ಧರಾದ ಕೃಷ್ಣಐಯ್ಯರ್

(1ನೇ ಪುಟದಿಂದ)

1952 ರ ಮೊದಲ ಚುನಾವಣೆಗಳಲ್ಲಿಯೇ ಮದ್ರಾಸ್ ವಿಧಾನ ಸಭೆಗೆ ಶಾಸಕರಾಗಿ ಆಯ್ಕೆಯಾದ ಇವರು 1956ರಲ್ಲಿ ಮಲಬಾರ್ ಗೇಣಿ ತಿದ್ದುಪಡಿ ಕಾನೂನು ತರಲು ಹಾಗೂ ಮಲಬಾರ್ ಕೃಷಿ ಸಂಬಂಧಗಳ ಕಾನೂನು ರೂಪಿಸಲು ಶ್ರಮಿಸಿದರು. 1957ರಲ್ಲಿ ರಚಿತವಾದ ಮೊದಲ ಕಮ್ಯೂನಿಸ್ಟ್ ಮಂತ್ರಿ ಮಂಡಲದಲ್ಲಿ ಗೃಹ ಖಾತೆ ನೀರಾವರಿ, ವಿದ್ಯುತ್, ಜೈಲು ಸಮಾಜ ಕಲ್ಯಾಣ ಖಾತೆಗಳ ಸಚಿವರಾಗಿ ಕೆಲಸ ಮಾಡಿದರು.

ಬಡ ರೈತರಿಗೆ ಉಚಿತ ಕಾನೂನು ಸಹಾಯ, ಮಹಿಳೆಯರಿಗೆ ಆಸ್ತಿಯ ಹಕ್ಕು, ಪೋಲೀಸ್ ನಿಯಮಾವಳಿಗಳಲ್ಲಿ ಬ್ರಿಟೀಷರ ಆಡಳಿತದ ದುರ್ದಮ ಕಾನೂನುಗಳನ್ನು ತೆಗೆದು ಹಾಕಿ ಮಾನವೀಯ. ಗೊಳಿಸುವುದು, ಕೈದಿಗಳ ಬಿಡುಗಡೆಯಾದಮೇಲೆಮತ್ತೆ ಅದೇ ಹಾದಿಯನ್ನು ತುಳಿಯುವುದನ್ನು ತಪ್ಪಿಸಲು ಪುನರ್ವಸತಿ ಕೇಂದ್ರಗಳು ಇವುಗಳನ್ನು ದೇಶದಲ್ಲಿಯೇ ಮೊತ್ತಮೊದಲಾಗಿಆರಂಭಿಸುವುದರಲ್ಲಿ ಕೃಷ್ಣಐಯ್ಯರ್‌ರವರ ಪಾತ್ರ ಹಿರಿದಾದದ್ದು.

ಮುಂದೆ ಕೇರಳದ ಮಂತ್ರಿ ಮಂಡಲವನ್ನು ಕಾಂಗ್ರೆಸ್ ಸರಕಾರ ಉರುಳಿಸಿದ ಮೇಲೆ ವಕೀಲರಾಗಿ, 1968ರಲ್ಲಿ ಹೈಕೋರ್ಟ್ ನ್ಯಾಯಾಧೀಶರಾಗಿ, ಕಾನೂನು ಆಯೋಗದ ಸದಸ್ಯರಾಗಿ, 1973ರಿಂದ 1980 ರವರೆಗೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ ಅವರು ನೀಡಿದ ತೀರ್ಪುಗಳು ಸರ್ವ ವಿದಿತ. 1958ರಲ್ಲಿಯೇ ವಿಶ್ವ ಶಾಂತಿ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಕೃಷ್ಣಐಯ್ಯರ್‌ರವರು ಇಂದಿನಮುಖ್ಯ ಪ್ರಶ್ನೆಯಾದ ವಿಶ್ವಶಾಂತಿ ಅಲಿಪ್ತ ಚಳುವಳಿಗಳ ಬಗ್ಗೆ ಹೊಂದಿರುವ ಅಭಿಪ್ರಾಯವೂ ಚೆನ್ನಾಗಿ ವ್ಯಕ್ತವಾಗುತ್ತದೆ. ●

ಅರಳುತ್ತಿರುವ ಕ್ರಾಂತಿ

(7ನೇ ಪುಟದಿಂದ)

ರಾದ 8–10ರಾಷ್ಟ್ರಗಳಿಗೆ ಅಮೇರಿಕಾದ ಆರ್ಥಿಕ ಸಹಾಯ ನಿಮಗೆ ಬೇಕಾದರೆ "ಆಫ್ರಿಕನ್ ನ್ಯಾಷನಲ್‌ಕಾಂಗ್ರೆಸ್"ನ ಸ್ವಾತಂತ್ರ್ಯಯೋಧರಿಗೆ ಗೆರಿಲ್ಲಾಗಳಿಗೆ ಆಶ್ರಯ ಕೊಡಬಾರದು ಎಂಬಶರತ್ತಿಗೆ ನೀಡಿದ ತಿರಸ್ಕಾರ ಪೂರ್ಣ ಉತ್ತರ ಇದು.

ಈ ಹಿಂದೆ ಒಮ್ಮೆ ಆಫ್ರಿಕಾದ ಸ್ವಾತಂತ್ರ್ಯಕ್ಕೆ ಮುಖ್ಯವಾಗಿ ದ.ಆಫ್ರಿಕಾದ ವರ್ಣಭೇದ ನೀತಿಯ ಬಿಳಿಯರ ಆಳ್ವಿಕೆಯ ಮುಂದುವರಿಕೆಗೆ ಅಮೇರಿಕಾವೇ ಹೊಣೆ ಎಂದು ಜಂಬಾಬ್ವೆಯ ವಿದೇಶ ಮಂತ್ರಿ ಅಮೇರಿಕಾದ ಮಾಜಿಅಧ್ಯಕ್ಷ ಕಾರ್ಟರ್‌ರವರ ಎದುರಾ ಎದುರೇ ಹೇಳಿದಾಗ ಕಾರ್ಟರ್ ಸಭಾತ್ಯಾಗ ಮಾಡಿಹೊರ ಬರಬೇಕಾಗಿಬಂದ ಘಟನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ●

ತೋರಣಗಲ್ಲು ರೈತರ ಮೆರವಣಿಗೆ

ದಿನಾಂಕ 15-6-87 ರಂದು ಮುಂಜಾನೆ 10ಗಂಟೆಗೆ ಮಂಡಲ ಪ್ರಧಾನರಿಗೆ ಮತ್ತು ಮಂಡಲ ಸದಸ್ಯರಿಗೆ ತೋರಣಗಲ್ಲು ಗ್ರಾಮದ ನಾಗರೀಕರು ರೈತ ಸಂಘದ ಸದಸ್ಯರು, ಯುವಕರು, ನೂರಾರು ಜನ ಮೆರವಣಿಗೆಯೊಂದಿಗೆ ಹೋಗಿ ತೋರಣಗಲ್ಲು ಗ್ರಾಮದ ಮಂಡಲ ಪ್ರಧಾನರಿಗೆ ಮತ್ತು ಸದಸ್ಯರಿಗೆ ತೋರಣಗಲ್ಲು ಮಂಡಲದ ಸ್ಥಳೀಯ ಸಮಸ್ಯೆಗಳನ್ನು ಈಡೇರಿಸಲು ಒತ್ತಾಯಿಸಿ ಮನವಿ ಪತ್ರವನ್ನು ಕೊಡಲಾಯಿತು.

ದಿನಾಂಕ 15-6-87 ರಂದು ಸಾಯಂಕಾಲ 7ಗಂಟೆಗೆ ಗ್ರಾಮದಲ್ಲಿ ಬಹಿರಂಗ ಸಭೆ ಮತ್ತು 'ನರಗುಂದ ರೈತ ಬಂಡಾಯ' ಮತ್ತು 'ಪತ್ರೆ ಸಂಗಪ್ಪನ ಕೊಲೆ' ಸಮುದಾಯ ನಾಟಕನ್ನು ಪ್ರದರ್ಶಿಸಲಾಯಿತು. ಗ್ರಾಮದ ಎಲ್ಲಾ ಜನರು ಭಾಗವಹಿಸಿದರು. ಬಹಿರಂಗ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಸದಸ್ಯರಾದ ಕಾ| ಅಮಪ್ಪ ಸ್ವಾಗತ ಭಾಷಣ ಮಾಡಿದರು. ಈ ಸಭೆಗೆ ಡಿ.ವೈ.ಎಫ್.ಐ.ಯ ಜಿಲ್ಲಾ ಉಪಾಧ್ಯಕ್ಷರಾದ ಕಾ| ಜೆ.ಎಂ. ಚೆನ್ನಬಸಯ್ಯನವರು ಗ್ರಾಮದ ಸಮಸ್ಯೆಗಳ ಬಗ್ಗೆ ಮಾತನಾಡಿದರು. ಎಸ್.ಎಫ್.ಐ.ನ ಸಂಡೂರು ತಾಲ್ಲೂಕು ಸಂಚಾಲಕರಾದ ಕಾ|ಬಿ. ಷಣ್ಮುಖಪ್ಪನವರು ಸ್ಥಳೀಯ ಬೇಡಿಕೆಗಳ ಬಗ್ಗೆ ಮಾತನಾಡಿದರು.

ರಾಜ್ಯ ಸಮಿತಿ ಸಭೆ

ದಿನಾಂಕ 9.7.87 ರ ಗುರುವಾರ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಸಭೆ ಬೆಂಗಳೂರಿನ ಶಾಸಕರ ಭವನದಲ್ಲಿ ಬೆಳಗ್ಗೆ 10.30ಕ್ಕೆಸೇರಲಿದೆ. ರಾಜ್ಯ ಸಮಿತಿ ಸದಸ್ಯರೆಲ್ಲರೂ ಗಮನಿಸಿ ದಯಮಾಡಿ ಹಾಜರಾಗಬೇಕೆಂದು ರಾಜ್ಯ ಸಮಿತಿ ಕಾರ್ಯದರ್ಶಿ ವಿನಂತಿಸಿದ್ದಾರೆ.

ಈ ವಾರ....

★ ಮಂತ್ರಿಮಂಡಲದ ಗಾತ್ರ ದೊಡ್ಡದಾಯಿತು. ಈ ಟೀಕೆಯಲ್ಲಿ ಹುರುಳುಂಟು. ಅಧಿಕಾರ ವಿಕೇಂದ್ರೀಕರಣ ಆಗುತ್ತಿರುವಾಗ ಇಷ್ಟು ಸಂಖ್ಯೆಯ ಮಂತ್ರಿಗಳು ಇರಬೇಕೆ ? ಜನರಿಗೆ ಸೇವೆ ಸಲ್ಲಿಸಲು ಮಂತ್ರಿಯೇ ಆಗಬೇಕೆಂಬ ನಿಯಮವೇನೂ ಇಲ್ಲ. ಆದರೆ ಮಂತ್ರಿ ಆಗಲು ಇರುವ ರಭಸ ಮೆಚ್ಚುವಂತದ್ದಲ್ಲ. ಎಲ್ಲಾ ಜಾತಿಗಳಿಗೂ ಎಲ್ಲಾ ಜಿಲ್ಲೆಗಳಿಗೂ ಪ್ರಾತಿನಿಧ್ಯ ಎಂಬ ಸೂತ್ರವನ್ನು ಬಹಳ ದೂರ ಎಳೆಯಬಾರದು.

ಕನ್ನಡ ಪ್ರಭ ಜೂನ್ 27.

★ ಬಹುರಾಷ್ಟ್ರೀಯ ಕಂಪೆನಿಗಳೊಂದಿಗೆ ಸಹಕಾರ ಒಪ್ಪಂದ ಮೂಲಕವೂ ದೇಶದಿಂದ ಬಂಡವಾಳ ಹೊರಗೆ ಹರಿದು ಹೋಗುತ್ತದೆ ಎಂಬುದನ್ನು ಮಾಜಿ ಹಣಕಾಸು ಮಂತ್ರಿ ವಿ.ಪಿ.ಸಿಂಗ್ ಒಪ್ಪಿಕೊಂಡಿದ್ದಾರೆ.ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿರುವಂತಹ ಆರ್ಥಿಕ ದುಸ್ಥಿತಿಗೆ ಕಾರಣವಾದ ಮೂರು ದುಷ್ಟ ಅಂಶಗಳಲ್ಲಿ ಬಂಡವಾಳ ಹೊರಗೆ ಹರಿದು ಹೋಗುವುದು ಒಂದೆಂದು ಅವರು ಹಿಂದೆ ಹೇಳಿದ್ದರು. ಅವರ ಪ್ರಕಾರ ಉಳಿದೆರಡು ಅಂಶಗಳೆಂದರೆ ಬಜೆಟ್ ಕೊರತೆ ಮತ್ತು ವಾಣಿಜ್ಯ ಕೊರತೆ.

ಡೆಕ್ಕನ್ ಹೆರಾಲ್ಡ್ ಸುದ್ಧಿ, ಜೂನ್, 30.

★ ರಕ್ಷಣಾ ವಕ್ತಾರರ ಪ್ರಕಾರ ಶ್ರೀಲಂಕಾ ಪಾಕಿಸ್ತಾನದ ಮೂಲಕ ಭಾರೀ ಪ್ರಮಾಣದಲ್ಲಿ ಅಮೇರಿಕನ್ ಶಸ್ತ್ರಾಸ್ತ್ರ ಪಡೆದಿದೆ. ಅಮೇರಿಕಾದ ಉದ್ದೇಶ ಶ್ರೀಲಂಕಾ ಸರ್ಕಾರಕ್ಕೆ ನೆರವಾಗುವುದಕ್ಕಿಂತ ಮಿಗಿಲಾಗಿ ಭಾರತವನ್ನು ಕೆಣಕುವುದೇ ಆಗಿದೆ ಎಂದು ಅವರು ಹೇಳಿದ್ದಾರೆ.

ಯು.ಎನ್.ಐ. ಸುದ್ಧಿ, ಜೂನ್ 28.

★ ಅಹ್ಮದಾಬಾದ್‌ನಲ್ಲಿ ಈ ಬಾರಿ 'ರಥಯಾತ್ರೆ'ಯಲ್ಲಿ ಅಹಿತಕರ ಘಟನೆಗಳು ನಡೆಯದಿರಲು ಭಾರೀಭದ್ರತಾಬಂದೋಬಸ್ತು ಹಾಗೂ ಜನರಲ್ಲಿ ಭಯ ಮಾತ್ರವಲ್ಲದೆ ಇನ್ನೂ ಎರಡು ಅಂಶಗಳು ಮಹತ್ವದ ಪಾತ್ರ ವಹಿಸಿದಂತೆ ಕಾಣುತ್ತದೆ. ಅಹ್ಮದಾಬಾದ್ ನಗರ ಸಭೆಯಲ್ಲಿ ಅಧಿಕಾರಕ್ಕೆ ಬಂದ ನಾಲ್ಕೇ ತಿಂಗಳಲ್ಲಿ ತನ್ನ ಹೆಸರು ಕೆಡಿಸಿಕೊಳ್ಳದಿರಲು ಬಿ.ಜೆ.ಪಿ.ಯು ಹಿಂಸಾಚಾರೀ ಶಕ್ತಿಗಳಿಗೆ ಪ್ರೋತ್ಸಾಹ ನೀಡದಿದ್ದುದು. ಹಾಗೂ ಮುಸ್ಲಿಮರು ಪ್ರತಿ ಹಿಂಸಾಚಾರಕ್ಕೆ ಇಳಿಯದಂತೆ ಕಳ್ಳ ಸಾಗಾಣಿಕೆ ದಂಧೆಯಲ್ಲಿನ ಮುಸ್ಲಿಂ ಮುಖಂಡರ ಪ್ರಯತ್ನ ಇವೇ ಆ ಎರಡು ಅಂಶಗಳು.

ಇ.ಎನ್.ಎಫ್. ಸುದ್ಧಿ, ಜೂನ್ 30.

★ ದಕ್ಷಿಣ ಏಷ್ಯದಲ್ಲಿ ಪಾಕಿಸ್ತಾನ ಅಮೇರಿಕದ ಹಿತಾಸಕ್ತಿಯನ್ನು ಕಾಪಾಡುತ್ತಿದೆಯೆಂದು ಪಾಕಿಸ್ತಾನದ ರಾಷ್ಟ್ರಪತಿ ಹೇಳಿಕೊಂಡಿರುವುದರಲ್ಲಿ ಹೊಸ ಅಂಶವೇನಿಲ್ಲ.... ಅಫಘಾನಿಸ್ತಾನದ ಪ್ರಶ್ನೆ ಇತ್ಯರ್ಥವಾದರೂ ಅಮೇರಿಕ–ಪಾಕಿಸ್ತಾನ ಸಂಬಂಧದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲವಂತೆ. ಅಂದರೆ ಅಫಘಾಸ್ತಾನದಲ್ಲಿ ಸೋವಿಯೆತ್ ಸೇನೆ ಇರುವುದರಿಂದ ಆಧುನಿಕ ಶಸ್ತ್ರಾಸ್ತ್ರ ಒದಗಿಸುತ್ತಿರುವುದಾಗಿ ಅಮೇರಿಕ ಮತ್ತು ಪಾಕಿಸ್ತಾನ ಹೇಳುತ್ತಿದ್ದದ್ದೆಲ್ಲಾ ಸುಳ್ಳು ಎನ್ನುವುದು ಸಮರ್ಥನೆಗೊಂಡಿತು. ಈ ಹೇಳಿಕೆ ಭಾರತವೂ ಸೇರಿದಂತೆ ಈ ಪ್ರದೇಶದ ರಾಷ್ಟ್ರಗಳಲ್ಲಿ ತೀರ ಆಂತಕವನ್ನು ಉಂಟು ಮಾಡಲಿದೆ.

ಪ್ರಜಾವಾಣಿ, ಜೂನ್ 28.

★ ಬರೋಡಾದಲ್ಲಿ ಇರಿತದಿಂದ ಹದಿನಾಲ್ಕು ವರ್ಷದ ಬಾಲಕಿಯ ಸಾವಿನೊಂದಿಗೆ ಕಳೆದಮಂಗಳವಾರದಿಂದ ನಡೆಯುತ್ತಿರುವ ಹಿಂಸಾಚಾರದಲ್ಲಿ ಸತ್ತವರ ಸಂಖ್ಯೆ6ಕ್ಕೇರಿದೆಮಂಗಳವಾರದ ಘಟನೆಗಳ ಸಂಬಂಧದಲ್ಲಿ ಬರೋಡಾದ ಉಪಮೇಯರ್ ಆಗಿರುವ ಬಿ.ಜೆ.ಪಿ. ಮುಖಂಡ ನಳಿನ್ ಭಟ್ ಮತ್ತಿತರ ಐವರನ್ನು ಬಂಧಿಸಲಾಗಿದೆ.

ಯು.ಎನ್.ಐ.ಸುದ್ಧಿ, ಜುಲೈ 1.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P· RamachandraRao
Managing Editor : N. K. Upadhyaya